ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1445
ಸದಸ್ಯರ ಹೆಸರು : ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 10.03.2022
ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಬೆಂಗಳೂರು ನಗರದಲ್ಲಿ ಅತಿಹೆಚ್ಚು ಸಂಚಾರ ದಟ್ಟಣೆಯಿಂದ ಕೂಡಿರುವ ಸ್ಥಳಗಳನ್ನು ಸರ್ಕಾರವು ಗುರುತಿಸಿದೆಯೇ ; ಹೌದಾದಲ್ಲಿ, ಸಂಪೂರ್ಣ ಮಾಹಿತಿ ನೀಡುವುದು ; ಸಂಚಾರಿ ದಟ್ಟಣೆ ನಿಯಂತ್ರಣಕ್ಕಾಗಿ ರೂಪಿಸಿರುವ ಮಾರ್ಗಸೂಚಿಗಳೇನು ;	ಉತ್ತರವನ್ನು **ಅನುಬಂಧ-1**ರಲ್ಲಿ ಲಗತ್ತಿಸಿದೆ.
(ಆ)	ಬೆಂಗಳೂರು ನಗರದಲ್ಲಿ ಸಂಚಾರ ದಟ್ಟಣೆ ಇದ್ದರೂ ಸಹ, ಅದನ್ನು ನಿಯಂತ್ರಿಸಲು ಬಾರದ ಪೊಲೀಸರು ರಸ್ತೆಯಲ್ಲಿ ದಂಡ ವಸೂಲಿಗಾಗಿ ಎಲ್ಲೆಂದರಲ್ಲಿ ನಿಂತಿರುತ್ತಾರೆಂಬ ಸಾರ್ವಜನಿಕರ ದೂರು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ನಿತ್ಯ ಸಂಚಾರ ದಟ್ಟಣೆ ಉಂಟಾಗುವ (ಸಿಗ್ನಲ್ ದೀಪಗಳು ಇಲ್ಲದಿರುವ) ಸ್ಥಳಗಳಲ್ಲಿ ಸಂಚಾರ ಪೊಲೀಸರನ್ನು ನಿಯೋಜಿಸಲು ಸರ್ಕಾರವು ಕ್ರಮವಹಿಸುವುದೇ;	ಗಮನಕ್ಕೆ ಬಂದಿರುತ್ತದೆ. ಸಂಚಾರ ನಿಯಮ ಉಲ್ಲಂಘನೆಗಳನ್ನು ತಡೆಗಟ್ಟಿ ರಸ್ತೆ ಸುರಕ್ಷತೆಯನ್ನು ಹೆಚ್ಚಿಸಿ ಅಪಘಾತಗಳನ್ನು ತಡೆಗಟ್ಟುವುದು ಮತ್ತು ಸಾವುನೋವುಗಳನ್ನು ಕಡಿಮೆ ಮಾಡುವುದು ಸಂಚಾರ ಪೊಲೀಸರ ಆದ್ಯ ಕರ್ತವ್ಯವಾಗಿದೆ. ಸಂಚಾರ ನಿಯಮ ಉಲ್ಲಂಘನೆಗಳನ್ನು ದಾಖಲಿಸುವಾಗ ಸಾರ್ವಜನಿಕರಿಗೆ ತೊಂದರೆಯಾಗದಂತೆ ಮತ್ತು ಪಾರದರ್ಶಕತೆ ಕಾಪಾಡಲು ಪೂರ್ವನಿರ್ಧರಿತ ಕಾರ್ಯ ಯೋಜನೆಯನ್ನು ತಯಾರಿಸಿ ಸುತ್ತೋಲೆಯ ಮೂಲಕ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ನಿರ್ದೇಶನ ನೀಡಲಾಗಿದ್ದು, ಸುತ್ತೋಲೆಯ ಪ್ರತಿಯನ್ನು **ಅನುಬಂಧ-2**ರಲ್ಲಿ ಲಗತ್ತಿಸಿದೆ. ಈ ಸುತ್ತೋಲೆಯಲ್ಲಿನ ಸೂಚನೆಗಳನ್ನು ಉಲ್ಲಂಘಿಸಿದವರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆ. ನಿತ್ಯ ಸಂಚಾರ ದಟ್ಟಣೆ ಉಂಟಾಗುವ ಸಿಗ್ನಲ್ ದೀಪಗಳನ್ನು ಅಳವಡಿಸಿರುವ 388 ಜಂಕ್ಷನ್‌ಗಳ ಸಹಿತ ಸಿಗ್ನಲ್ ದೀಪ ಅಳವಡಿಸದೇ ಇರುವ 112 ಜಂಕ್ಷನ್ ಸ್ಥಳಗಳಲ್ಲಿ 'ಎ' ಮತ್ತು 'ಬಿ' ಪಾಳಿಗಳಲ್ಲಿ ಪ್ರತಿ ಪಾಳಿಗೆ 712 ರಂತೆ ಒಟ್ಟು 1424 ಸಂಚಾರ ಪೊಲೀಸರನ್ನು ಸಂಚಾರ ನಿಯಂತ್ರಣ ಮತ್ತು ನಿರ್ವಹಣೆಗೆ ನಿಯೋಜಿಸಲಾಗುತ್ತಿದೆ.
(ಇ)	ಬೆಂಗಳೂರು ನಗರದಲ್ಲಿ ಸಂಚಾರ ನಿಯಮ ಉಲ್ಲಂಘನೆ ಪತ್ತೆಗಾಗಿ. ಎ.ಎನ್.ಪಿ.ಆರ್ ಕ್ಯಾಮೆರಾ ಉಪಕರಣಗಳನ್ನು ಅಳವಡಿಸಿಕೊಳ್ಳಲಾಗಿದೆಯೇ ; ಹೌದಾದಲ್ಲಿ, ಎಲ್ಲೆಲ್ಲಿ ಅಳವಡಿಸಲಾಗಿದೆ ;	ಸಂಚಾರ ನಿಯಮ ಉಲ್ಲಂಘನೆ ಪತ್ತೆಗಾಗಿ ಬೆಂಗಳೂರು ನಗರದಲ್ಲಿ ಸಿ.ಬಿ.ಡಿ (ಸೆಂಟ್ರಲ್ ಬಿಸಿನೆಸ್ ಡಿಸ್ಟ್ರಿಕ್ಟ್) ಪ್ರದೇಶದ ಈ ಕೆಳಕಂಡ ಸಂಚಾರ ಪೊಲೀಸ್ ಠಾಣೆಗಳಿಗೆ 20 ಎ.ಎನ್.ಪಿ.ಆರ್ (ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಂಡು ಸ್ವಯಂಚಾಲಿತವಾಗಿ ವಾಹನ ನೋಂದಣಿ ಸಂಖ್ಯೆ ಗುರುತಿಸುವ ಕ್ಯಾಮೆರಾ) ಕ್ಯಾಮೆರಾಗಳನ್ನು ಪೋರ್ಟಬಲ್ ಟ್ರೈಪಾಡ್, ಬ್ಯಾಟರಿ

<table>
<tr>
<td></td>
<td></td>
<td>ಮತ್ತು 4ಜಿ ಮೋಡಮ್‌ನೊಂದಿಗೆ ಹಂಚಿಕೆ ಮಾಡಲಾಗಿದೆ. ಪೊಲೀಸ್ ಇನ್‌ಸ್ಪೆಕ್ಟರ್‌ಗಳು ತಮ್ಮ ತಮ್ಮ ಠಾಣಾ ವ್ಯಾಪ್ತಿಯಲ್ಲಿ ಅಗತ್ಯವಿರುವಲ್ಲಿ ಅವುಗಳನ್ನು ಅಳವಡಿಸಿಕೊಳ್ಳಲು ಮತ್ತು ವಿವಿಧ ಸ್ಥಳಗಳಲ್ಲಿ ಅವುಗಳ ಉಪಯುಕ್ತತೆಯನ್ನು ಬಳಸಿಕೊಳ್ಳಲು ನಿರ್ದೇಶನ ನೀಡಲಾಗಿದೆ.
<table>
<tr><th>ಕ್ರ ಸಂ</th><th>ಸಂಚಾರ ಪೊಲೀಸ್ ಠಾಣೆ ಹೆಸರು</th><th>ಕ್ರ ಸಂ</th><th>ಸಂಚಾರ ಪೊಲೀಸ್ ಠಾಣೆ ಹೆಸರು</th></tr>
<tr><td>1</td><td>ಅಶೋಕನಗರ</td><td>11</td><td>ಮಡಿವಾಳ</td></tr>
<tr><td>2</td><td>ಹೈಗ್ರೌಂಡ್ಸ್</td><td>12</td><td>ಮೈಕೋ ಲೇಔಟ್</td></tr>
<tr><td>3</td><td>ವಿಲ್ಸನ್‌ಗಾರ್ಡನ್</td><td>13</td><td>ವಿ.ವಿ.ಪುರಂ</td></tr>
<tr><td>4</td><td>ಸದಾಶಿವನಗರ</td><td>14</td><td>ಮಲ್ಲೇಶ್ವರಂ</td></tr>
<tr><td>5</td><td>ಹಲಸೂರುಗೇಟ್</td><td>15</td><td>ರಾಜಾಜಿನಗರ</td></tr>
<tr><td>6</td><td>ಕಬ್ಬನ್‌ಪಾರ್ಕ್</td><td>16</td><td>ಉಪ್ಪಾರಪೇಟೆ</td></tr>
<tr><td>7</td><td>ಜೀವನಭೀಮಾನಗರ</td><td>17</td><td>ಚಿಕ್ಕಪೇಟೆ</td></tr>
<tr><td>8</td><td>ಪುಲಕೇಶಿನಗರ</td><td>18</td><td>ಮಾಗಡಿ ರಸ್ತೆ</td></tr>
<tr><td>9</td><td>ಹಲಸೂರು</td><td>19</td><td>ದೇವನಹಳ್ಳಿ</td></tr>
<tr><td>10</td><td>ಆಡುಗೋಡಿ</td><td>20</td><td>ಆರ್.ಟಿ. ನಗರ</td></tr>
</table>
</td>
</tr>
<tr>
<td>(ಉ)</td>
<td>ಎ.ಎನ್.ಪಿ.ಆರ್ ಕ್ಯಾಮೆರಾ ಉಪಕರಣಗಳ ಅಳವಡಿಕೆಗೆ ತಗಲುವ ವೆಚ್ಚವೆಷ್ಟು ; ಯಾವ ಸಂಸ್ಥೆಯಿಂದ ಇದನ್ನು ಖರೀದಿಸಲಾಗುತ್ತಿದೆ ; (ಸಂಪೂರ್ಣ ಮಾಹಿತಿ ನೀಡುವುದು) ಇದರ ಅಳವಡಿಕೆಗೆ ಇರುವ ಮಾನದಂಡವೇನು ?</td>
<td>ಮೆ॥ ಮ್ಯಾಟ್ರಿಕ್ಸ್ ಸೆಕ್ಯೂರಿಟಿ ಅಂಡ್ ಸರ್ವೈಲೆನ್ಸ್ ಪ್ರೈ ಲಿ., ಹೈದರಾಬಾದ್ ರವರು 20 ಎ.ಎನ್.ಪಿ.ಆರ್ ಕ್ಯಾಮೆರಾಗಳನ್ನು ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ರವರಿಗೆ ಸರಬರಾಜು ಮಾಡಿದ್ದು, ಸದರಿಯವರು ಬೆಂಗಳೂರು ನಗರ ಸಂಚಾರ ವಿಭಾಗಕ್ಕೆ ಕೊಡುಗೆಯಾಗಿ ನೀಡಿರುತ್ತಾರೆ.

ಈ ಕ್ಯಾಮೆರಾಗಳು ಈ ಕೆಳಕಂಡ ಮಾನದಂಡಗಳನ್ನು ಹೊಂದಿವೆ.

1. ಸಂಪರ್ಕ ರಹಿತ ನಿಯಮಜಾರಿ ಸಮಯದಲ್ಲಿ ಘಟಿಸಿರುವ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳು ದಾಖಲಾಗಿದ್ದು, ದಂಡ ಪಾವತಿಸದೆ ಬಾಕಿ ಉಳಿಸಿಕೊಂಡಿರುವ ವಾಹನಗಳನ್ನು ಗುರುತಿಸಿ ಪಾವತಿಸಬೇಕಾದ ದಂಡ ಮೊತ್ತದ ವಿವರಗಳ ಸಮೇತ ನಿಯಮ ಜಾರಿ ಮಾಡುವ ಅಧಿಕಾರಿಗಳಿಗೆ ರವಾನಿಸುತ್ತದೆ.
2. ಪೊಲೀಸ್ ಇಲಾಖೆಯಲ್ಲಿ ಈಗಾಗಲೇ ಲಭ್ಯವಿರುವ ಕಳ್ಳತನವಾಗಿವೆಯೆಂದು ವರದಿಯಾಗಿರುವ ಅಪರಾಧ ಚಟುವಟಿಕೆಗಳಲ್ಲಿ ತೊಡಗಿರುವ ನಕಲಿ ನಂಬರ್ ಪ್ಲೇಟ್ ಹೊಂದಿವೆ ಎಂದು ವರದಿಯಾಗಿರುವ ವಾಹನಗಳ ದತ್ತಾಂಶದಿಂದ ರಸ್ತೆ ಮೇಲೆ ಸಂಚರಿಸುವ ವಾಹನಗಳ ನೋಂದಣಿ ಸಂಖ್ಯೆಯನ್ನು ಆಧರಿಸಿ ಅವು ಯಾವುದಾದರೂ ಪ್ರಕರಣದಲ್ಲಿ ಕಳ್ಳತನವಾಗಿರುವ ವಾಹನಗಳಾಗಿದ್ದಲ್ಲಿ ನಿಖರವಾಗಿ ಗುರುತಿಸುವ ಕ್ಷಮತೆಯನ್ನು ಹೊಂದಿರುತ್ತವೆ.
3. ಈ ಕ್ಯಾಮೆರಾಗಳನ್ನು ಸುಲಭವಾಗಿ ಒಂದು ಸ್ಥಳದಿಂದ</td>
</tr>
</table>

		ಮತ್ತೊಂದು ಸ್ಥಳಕ್ಕೆ ಕೊಂಡೊಯ್ಯಬಹುದಾಗಿದ್ದು ಅಗತ್ಯ ಮತ್ತು ಸೂಕ್ತವೆನಿಸುವ ಸ್ಥಳಗಳಲ್ಲಿ ಇಡಬಹುದಾಗಿದೆ. 4. ಅಧಿಕಾರಿ ಮತ್ತು ಸಿಬ್ಬಂದಿಯವರನ್ನು ಅತಿ ಕಡಿಮೆ ಅವಧಿಯಲ್ಲಿ ಈ ಕ್ಯಾಮೆರಾಗಳನ್ನು ಬಳಸಲು ಅಗತ್ಯವಿರುವ ಕೌಶಲ್ಯವನ್ನು ನುರಿತ ತಂತ್ರಜ್ಞರಿಂದ ವರ್ಗಾಯಿಸಬಹುದಾಗಿದೆ.

ಹೆಚ್‌ಡಿ 110 ಎಸ್‌ಎಸ್‌ಟಿ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು

ಪ್ರಶ್ನೆ(ಅ): ಬೆಂಗಳೂರು ನಗರದಲ್ಲಿ ಅತಿಹೆಚ್ಚು ಸಂಚಾರ ದಟ್ಟಣೆಯಿಂದ ಕೂಡಿರುವ ಸ್ಥಳಗಳನ್ನು ಸರ್ಕಾರವು ಗುರುತಿಸಿದೆಯೇ ; ಹೌದಾದಲ್ಲಿ, ಸಂಪೂರ್ಣ ಮಾಹಿತಿ ನೀಡುವುದು ; ಸಂಚಾರಿ ದಟ್ಟಣೆ ನಿಯಂತ್ರಣಕ್ಕಾಗಿ ರೂಪಿಸಿರುವ ಮಾರ್ಗಸೂಚಿಗಳೇನು ;

ಉತ್ತರ: ಬೆಂಗಳೂರು ನಗರವು ಪ್ರಪಂಚದ ಅತಿ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲೊಂದು. ಐಟಿ/ಬಿಟಿ ಕ್ಷೇತ್ರದಲ್ಲಿ ಅತಿ ಹೆಚ್ಚು ಖ್ಯಾತಿ ಗಳಿಸಿರುವ ಬೆಂಗಳೂರು ನಗರವು ಸಿಲಿಕಾನ್ ಸಿಟಿ ಎಂಬ ಬಿರುದನ್ನು ಗಳಿಸಿ ವಿಶ್ವಖ್ಯಾತಿ ಹೊಂದಿದೆ. ಅಭಿವೃದ್ಧಿ ಹಾಗೂ ಪ್ರಖ್ಯಾತಿಯ ಜೊತೆಜೊತೆಗೆ ಟ್ರಾಫಿಕ್ ಸಮಸ್ಯೆಗಳೂ ಹೆಚ್ಚುತ್ತಿವೆ. ಬೆಂಗಳೂರು ನಗರದ ರಸ್ತೆಗಳು ಕಿರಿದಾಗಿದ್ದು ಸುಮಾರು 44,000 ಕೂಡು ರಸ್ತೆಗಳಿರುತ್ತವೆ.

ಬೆಂಗಳೂರು ನಗರ ಸಂಚಾರ ವಿಭಾಗವು ವಾಹನ ಸಂಚಾರ ಸಂಚಾರ ಸಮಸ್ಯೆಗಳ ಸುಧಾರಣೆಗೆ ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಂಡು ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗಿದೆ.

➤ **ಹೈ ಡೆನ್ಸಿಟಿ ಕಾರಿಡಾರ್ ರಸ್ತೆಗಳು:**

ಬೆಂಗಳೂರು ನಗರದಲ್ಲಿ ಪ್ರತಿನಿತ್ಯ ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ವಾಹನ ಸಂಖ್ಯೆಗೆ ಪ್ರಮುಖ ಕಾರಣವಾದ ಆರ್ಥಿಕ ಉದಾರೀಕರಣದ ಪರಿಣಾಮದಿಂದ ಹೊಸ ಬಡಾವಣೆಗಳ ನಿರ್ಮಾಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ಸ್ಥಾಪನೆ, ಮಾಹಿತಿ/ಜೈವಿಕ ತಂತ್ರಜ್ಞಾನ ಸಂಸ್ಥೆಗಳ ಸ್ಥಾಪನೆ ಇವೆಲ್ಲದರ ನೇರ ಪರಿಣಾಮವಾಗಿ ವಾಹನಗಳ ಸಂಚಾರ ಹೆಚ್ಚುತ್ತಲೇ ಇದೆ. ಜನಸಂಖ್ಯೆ ಹಾಗೂ ವಾಹನಗಳ ಸಂಖ್ಯೆಯಲ್ಲಿ ಹೆಚ್ಚಳಗೊಂಡಿದ್ದರ ಪರಿಣಾಮ ಅನೇಕ ರೀತಿಯಲ್ಲಿ ಸಂಚಾರ ಸಮಸ್ಯೆಗಳು ಅಂದರೆ ಸಂಚಾರದಲ್ಲಿ ದಟ್ಟಣೆ, ಸುಗಮ ಸಂಚಾರಕ್ಕೆ ಅಡ್ಡಿ, ಸಂಚಾರ ಸ್ಥಗಿತಗಳ ಜೊತೆಗೆ ಅಪಘಾತಗಳ ಹೆಚ್ಚಳಕ್ಕೆ ಕಾರಣವಾಗಿದೆ. ಈ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ ಘನ ಸರ್ಕಾರವು ಬೆಂಗಳೂರು ನಗರ ಸಂಚಾರ ವ್ಯವಸ್ಥೆ ಸುಧಾರಣೆಗೆ ಹತ್ತು ಹಲವು ವಿನೂತನ ಯೋಜನೆಗಳನ್ನು ಹಂತ ಹಂತವಾಗಿ ಹಮ್ಮಿಕೊಳ್ಳುವ ಸಲುವಾಗಿ ಕಾರ್ಯಯೋಜನೆಯನ್ನು ಸಿದ್ಧಪಡಿಸಿ ಸರ್ಕಾರದ ಅಡಿ ಇರುವ ಎಲ್ಲಾ ಇಲಾಖೆಗಳು ಒಂದೇ ಸೂರಿನಡಿ ಸೇರಿ ಕಾರ್ಯ ನಿರ್ವಹಿಸುವ ನಿಟ್ಟಿನಲ್ಲಿ ಶ್ರಮ ವಹಿಸುತ್ತಿದೆ. ಸರ್ಕಾರದ ಆದೇಶದ ಮೇರೆಗೆ ಹೈ ಡೆನ್ಸಿಟಿ ಕಾರಿಡಾರ್ ರಸ್ತೆಗಳಲ್ಲಿನ ಆಗಬೇಕಾದ ಅಭಿವೃದ್ಧಿ ಕಾರ್ಯಗಳನ್ನು ಪೂರೈಸಲು ಕೆ.ಆರ್.ಡಿ.ಸಿ.ಎಲ್.ಗೆ ವಹಿಸಲಾಗಿದೆ.

ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಸಂಚಾರ ವ್ಯವಸ್ಥೆಯನ್ನು ಉತ್ತಮ ಪಡಿಸುವ ಸಲುವಾಗಿ ನಗರ ವ್ಯಾಪ್ತಿಯಲ್ಲಿ ಈ ಕೆಳಕಂಡ 12 ಹೆಚ್ಚು ವಾಹನ ದಟ್ಟಣೆ ಕಾರಿಡಾರ್‌ಗಳನ್ನು ಗುರ್ತಿಸಲಾಗಿದೆ.

1.	ಬಳ್ಳಾರಿ ರಸ್ತೆ	–	<u>ಚಾಲುಕ್ಯ ವೃತ್ತದಿಂದ ಹೆಬ್ಬಾಳದ ವರೆಗೆ</u> ವಿಂಡ್ಸರ್ ಮ್ಯಾನರ್ ಜಂಕ್ಷನ್ – ರಮಣ ಮಹರ್ಷಿ ರಸ್ತೆ – ಮೇಖ್ರಿ ವೃತ್ತದ ಮಾರ್ಗವಾಗಿ
2	ಹಳೇ ಮದ್ರಾಸ್ ರಸ್ತೆ	–	<u>ಟ್ರಿನಿಟಿ ವೃತ್ತದಿಂದ ಕೆ.ಆರ್. ಪುರಂ ವರೆಗೆ</u> ಹಲಸೂರು ಕೆರೆ – ಹಳೆ ಮದ್ರಾಸ್ ರಸ್ತೆ ಮತ್ತು ಬೆನ್ನಿಗಾನಹಳ್ಳಿ ಹಾಗೂ <u>ಕೆ.ಆರ್. ಪುರಂನಿಂದ ರಾಷ್ಟ್ರೀಯ ಹೆದ್ದಾರಿ 648 ವರೆಗೆ</u> ಹೂಡಿ – ಐ.ಟಿ.ಪಿ.ಎಲ್ ಮತ್ತು ಹೋಫ್ ಫಾರಂ ಮಾರ್ಗವಾಗಿ
3	ಹಳೇ ಏರ್‌ಪೋರ್ಟ್ ರಸ್ತೆ	–	<u>ಎ.ಎಸ್.ಸಿ ಸೆಂಟರ್ ನಿಂದ ಕಾಡುಗೋಡಿ ವರೆಗೆ</u> ದೊಮ್ಮಲೂರು – ಮಾರತ್‌ಹಳ್ಳಿ – ಕುಂದಲಹಳ್ಳಿ – ವರ್ತೂರು ಮತ್ತು ಹೋಫ್ ಫಾರಂ ಮಾರ್ಗವಾಗಿ

4	ಸರ್ಜಾಪುರ ರಸ್ತೆ	–	ಹೊಸೂರು ರಸ್ತೆ ಸೇಂಟ್ ಜಾನ್ ಆಸ್ಪತ್ರೆಯಿಂದ ಬಿ.ಬಿ.ಎಂ.ಪಿ. ವ್ಯಾಪ್ತಿಯ ಕಾರ್ಮೆಲ್‌ರಾಂ ಬ್ರಿಡ್ಜ್ ವರೆಗೆ ಜಕ್ಕಸಂದ್ರ – ಇಬ್ಲೂರು – ಹರಳೂರು ಜಂಕ್ಷನ್ ಮಾರ್ಗವಾಗಿ
5	ಹೊಸೂರು ರಸ್ತೆ	–	ವೆಲ್ಲಾರ ಜಂಕ್ಷನ್ ನಿಂದ ಸಿಲ್ಕ್ ಬೋರ್ಡ್ ವರೆಗೆ ಆಡುಗೋಡಿ – ಫೋರಂ ಮಾಲ್ ಮತ್ತು ಮಡಿವಾಳ ಮಾರ್ಗವಾಗಿ
6	ಬನ್ನೇರುಘಟ್ಟ ರಸ್ತೆ	–	ಡೈರಿ ವೃತ್ತದಿಂದ ನೈಸ್ ರಸ್ತೆ ವರೆಗೆ ಜಯದೇವ ಫ್ಲೈಓವರ್ – ಜೆ.ಡಿ. ಮರ ಜಂಕ್ಷನ್ – ಬಿಳೇಕಳ್ಳಿ – ಅರಕೆರೆ ಮತ್ತು ಗೊಟ್ಟಿಗೆರೆ ಮಾರ್ಗವಾಗಿ
7	ಕನಕಪುರ ರಸ್ತೆ	–	ಕೆ.ಆರ್. ರಸ್ತೆಯಿಂದ ನೈಸ್ ರಸ್ತೆ ವರೆಗೆ ಬನಶಂಕರಿ – ಸಾರಕ್ಕಿ – ಕೋಣನಕುಂಟೆ ಮಾರ್ಗವಾಗಿ
8	ಮೈಸೂರು ರಸ್ತೆ	–	ಹಡ್ಸನ್ ವೃತ್ತದಿಂದ ನೈಸ್ ರಸ್ತೆ ವರೆಗೆ ಟೌನ್‌ಹಾಲ್ – ಸ್ಯಾಟಲೈಟ್ ಟೌನ್ – ನಾಯಂಡಹಳ್ಳಿ – ಜ್ಞಾನಭಾರತಿ – ಆರ್.ವಿ.ಕಾಲೇಜ್ ಆಫ್ ಇಂಜಿನಿಯರಿಂಗ್ & ಕೆಂಗೇರಿ ಸ್ಯಾಟಲೈಟ್ ಟೌನ್ ಮಾರ್ಗವಾಗಿ
9	ಮಾಗಡಿ ರಸ್ತೆ	–	ಹಳೇ ಬಿನ್ನಿ ಮಿಲ್ ನಿಂದ ನೈಸ್ ರಸ್ತೆ ವರೆಗೆ ಟೋಲ್‌ಗೇಟ್ ಜಂಕ್ಷನ್ – ಜೈಮುನಿರಾವ್ ವೃತ್ತ – ಹೌಸಿಂಗ್ ಬೋರ್ಡ್ – ಕಾಮಾಕ್ಷಿಪಾಳ್ಯ – ಹೊರವರ್ತುಲ ರಸ್ತೆ – ಶ್ರೀಗಂಧಕಾವಲ್ ಸುಂಕದಕಟ್ಟೆ ಮಾರ್ಗವಾಗಿ. ಹಾಗೂ ಅಂಜನ ನಗರ ಔಟರ್ ರಿಂಗ್ ರಸ್ತೆ – ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್ ನಿಂದ ಮೈಸೂರು ರಸ್ತೆ ವರೆಗೆ ಜಯದೇವ – ಜೆ.ಡಿ. ಮರ ಜಂಕ್ಷನ್ ಮಾರ್ಗವಾಗಿ
10	ತುಮಕೂರು ರಸ್ತೆ	–	ಓಕಳಿಪುರಂ ನಿಂದ ಗೊರಗುಂಟೆಪಾಳ್ಯ ವರೆಗೆ ಡಾ|| ರಾಜ್‌ಕುಮಾರ್ ರಸ್ತೆ – ಸೋಪ್ ಫ್ಯಾಕ್ಟರಿ ಜಂಕ್ಷನ್ ಮತ್ತು ಯಶವಂತಪುರ ಮಾರ್ಗವಾಗಿ
11	ವೆಸ್ಟ್ ಆಫ್ ಕಾರ್ಡ್ ರಸ್ತೆ	–	ಸೋಪ್ ಫ್ಯಾಕ್ಟರಿಯಿಂದ ಮೈಸೂರು ರಸ್ತೆ ವರೆಗೆ ಇಸ್ಕಾನ್ – ರಾಜಾಜಿನಗರ – ಟೋಲ್‌ಗೇಟ್ ಜಂಕ್ಷನ್, ವಿಜಯನಗರ ಮತ್ತು ದೀಪಾಂಜಲಿ ಮಾರ್ಗವಾಗಿ
12	ಹೊರ ವರ್ತುಲ ರಸ್ತೆ	–	ತುಮಕೂರು ರಸ್ತೆಯಿಂದ ತುಮಕೂರು ರಸ್ತೆ ವರೆಗೆ ಹೆಬ್ಬಾಳ – ಕೆ.ಆರ್. ಪುರಂ – ಮಾರತ್‌ಹಳ್ಳಿ – ಇಬ್ಲೂರು, ಸೆಂಟ್ರಲ್ ಸಿಲ್ಕ್ ಬೋರ್ಡ್ – ಜೆ.ಡಿ. ಮರ ಜಂಕ್ಷನ್ – ನಾಯಂಡಹಳ್ಳಿ ಜಂಕ್ಷನ್ – ಕೊಟ್ಟಿಗೆಪಾಳ್ಯ ಜಂಕ್ಷನ್ ಮತ್ತು ಗೊರಗುಂಟೆಪಾಳ್ಯ ಮಾರ್ಗವಾಗಿ

ಈ ಹೈಡೆನ್ಸಿಟಿ ಕಾರಿಡಾರ್‌ಗಳಲ್ಲಿ ಸುಗಮ ಸಂಚಾರಕ್ಕೆ ಏನೆಲ್ಲಾ ಅಭಿವೃದ್ಧಿ ಕಾರ್ಯಗಳು ಆಗಬೇಕು ಎಂಬುದರ ಬಗ್ಗೆ ಅಂದರೆ;

- ರಸ್ತೆ ಮೇಲ್ಸೇತುವೆ ನಿರ್ಮಾಣ
- ಗ್ರೇಡ್ ಸೆಪರೇಟರ್/ಫ್ಲೈ ಓವರ್
- ಮಲ್ಟಿ ಲೆವೆಲ್ ಪಾರ್ಕಿಂಗ್
- ರಸ್ತೆ ಅಗಲೀಕರಣ
- ಜಂಕ್ಷನ್‌ಗಳ ಅಭಿವೃದ್ಧಿ
- ಬಾಟಲ್‌ನೆಕ್ ಇರುವ ಸ್ಥಳಗಳ ವಿಸ್ತರಣೆ
- ಸ್ಕೈ ವಾಕ್
- ಬಸ್ ಬೇಸ್
- ಕಣ್ಗಾವಲು, ನಿಯಮ ಜಾರಿ ಕ್ಯಾಮೆರಾಗಳ ಅಳವಡಿಕೆ
- ಸಿಗ್ನಲ್ ಲೈಟ್‌ಗಳ ಅಳವಡಿಕೆ
- ಪಾದಚಾರಿ ರಸ್ತೆಗಳ ಉನ್ನತೀಕರಣ
- ರಸ್ತೆ ಉಬ್ಬರಗಳು ಮತ್ತು ಎತ್ತರಿಸಿದ ಪಾದಚಾರಿ ರಸ್ತೆ ದಾಟು ಅಳವಡಿಕೆ
- ರಸ್ತೆಗಳಿಗೆ ಮೀಡಿಯನ್ ಅಳವಡಿಕೆ
- ಮಳೆ ಬಂದಾಗ ನೀರು ನಿಲ್ಲುವ ಸ್ಥಳಗಳ ದುರಸ್ಥಿ
- ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳ ಮುಚ್ಚುವಿಕೆ ಇತ್ಯಾದಿ

ವಿಸ್ತೃತವಾಗಿ ಮಾಹಿತಿಯನ್ನು ಸಿದ್ಧಪಡಿಸಿದ್ದು, ಈಗಾಗಲೇ ಸಂಬಂಧಪಟ್ಟ ಪೌರಸಂಸ್ಥೆಗಳು ಮೇಲ್ಕಂಡ ಅಭಿವೃದ್ಧಿ ಕಾರ್ಯಗಳಲ್ಲಿ ಕಾರ್ಯಪ್ರವೃತಿಗೊಂಡಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ರಾಜ್ಯದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ವಿವಿಧ ಇಲಾಖೆಗಳ ಮುಖ್ಯಸ್ಥರುಗಳೊಂದಿಗೆ ಆಗಿಂದಾಗ್ಗೆ ಸಭೆಗಳನ್ನು ಹಮ್ಮಿಕೊಂಡು ಕಾರ್ಯ ಪ್ರಗತಿಗಳನ್ನು ಪರಿಶೀಲಿಸಲಾಗುತ್ತಿದೆ.

➢ <u>ಸಿ.ಬಿ.ಡಿ ಏರಿಯಾ:</u> (ಸೆಂಟ್ರಲ್ ಬಿಸಿನೆಸ್ ಡಿಸ್ಟ್ರಿಕ್ಟ್)

ಬೆಂಗಳೂರು ನಗರ ವ್ಯಾಪ್ತಿಯಲ್ಲಿ ವಿಧಾನಸೌಧದ ಸುತ್ತ 4 ಚ.ಕಿ.ಮೀ ವ್ಯಾಪ್ತಿಯನ್ನು ಸೆಂಟ್ರಲ್ ಬಿಸಿನೆಸ್ ಡಿಸ್ಟ್ರಿಕ್ಟ್ ಪ್ರದೇಶವೆಂದು ಈಗಾಗಲೇ ಘೋಷಿಸಲಾಗಿದೆ. ಈ ವ್ಯಾಪ್ತಿಯಲ್ಲಿ ವಿಧಾನಸೌಧ, ವಿಕಾಸಸೌಧ, ಆರ್.ಬಿ.ಐ ಒಳಗೊಂಡಂತೆ ಎತ್ತರದ ಕಟ್ಟಡಗಳು, ಕಾನ್ಸುಲೇಟ್ ಕಛೇರಿಗಳು, ಪ್ರಮುಖ ಹೋಟೆಲ್‌ಗಳು, ಆಸ್ಪತ್ರೆಗಳು, ಶಾಪಿಂಗ್ ಕಾಂಪ್ಲೆಕ್ಸ್‌ಗಳು, ಸಂಘ ಸಂಸ್ಥೆಗಳು, ಶಾಲಾ ಕಾಲೇಜುಗಳು, ಉದ್ಯಾನವನಗಳು, ರಾಜ್ಯ ಮತ್ತು ಕೇಂದ್ರ ಸರ್ಕಾರದ ಕಛೇರಿಗಳು, ಕ್ರೀಡಾಂಗಣಗಳು, ಬೆಂಗಳೂರು ಟರ್ಫ್ ಕ್ಲಬ್, ಗಾಲ್ಫ್ ಕ್ಲಬ್ ಇತ್ಯಾದಿಗಳಿರುತ್ತವೆ. ಈ ವ್ಯಾಪ್ತಿಯಲ್ಲಿ ಬರುವ ರಸ್ತೆಗಳು ಪ್ರಾರಂಭದಲ್ಲಿ ನಿರ್ಮಾಣಗೊಂಡ ಸ್ಥಿತಿಯಲ್ಲಿಯೇ ಇದ್ದು, ಇವುಗಳ ಅಗಲೀಕರಣದಲ್ಲಿ ಯಾವುದೇ ಬದಲಾವಣೆಯಾಗದೆ ಇರುತ್ತವೆ. ಇವುಗಳು ನಿರ್ಮಾಣಗೊಂಡ ಸಮಯದಲ್ಲಿದ್ದ ನಗರ ಸಂಚಾರವು ವರ್ಷದಿಂದ ವರ್ಷಕ್ಕೆ ದುಪ್ಪಟ್ಟುಗೊಂಡು ಪ್ರಸ್ತುತದ ಸಂಚಾರ ಸಾಂದ್ರತೆಯನ್ನು ತೆಗೆದುಕೊಳ್ಳಲು ಈ ರಸ್ತೆಗಳು ಸಮರ್ಥವಾಗಿರದೆ ಆಗಾಗ್ಗೆ ಸಂಚಾರ ಸ್ಥಗಿತಕೊಳ್ಳಲು ಮತ್ತು ಅಪಘಾತಗಳಿಗೂ ಕಾರಣವಾಗುತ್ತಿದೆ.

ಸಿ.ಬಿ.ಡಿ ಪ್ರದೇಶದಲ್ಲಿ ಬರುವ ಪ್ರಮುಖ ರಸ್ತೆಗಳ ವಿವರ ಈ ಕೆಳಕಂಡಂತೆ ಇರುತ್ತದೆ.

✓ 100 ಅಡಿ ಒಳವರ್ತುಲ ರಸ್ತೆ: ಅಯ್ಯಪ್ಪ ದೇವಸ್ಥಾನ ಜಂಕ್ಷನ್‌ನಿಂದ ಶ್ರೀನಿವಾಗಿಲು ಜಂಕ್ಷನ್‌ವರೆಗೆ

✓ ಹೊಸೂರು ಲಷ್ಕರ್ ರಸ್ತೆ: ವೆಲ್ಲಾರ ಜಂಕ್ಷನ್‌ನಿಂದ ಅಯ್ಯಪ್ಪ ದೇವಸ್ಥಾನ ಜಂಕ್ಷನ್‌ವರೆಗೆ

✓ ಡಾ॥ ಮರಿಗೌಡ ರಸ್ತೆ: ಬೆಂಗಳೂರು ಡೈರಿ ಜಂಕ್ಷನ್‌ನಿಂದ ಚೆಕ್ ಪೋಸ್ಟ್ ಜಂಕ್ಷನ್‌ವರೆಗೆ

✓ ಜಯಮಹಲ್ ರಸ್ತೆ & ನಂದಿ ದುರ್ಗ ರಸ್ತೆ: ಮೇಖ್ರಿ ಸರ್ಕಲ್‌ನಿಂದ ಕಂಟೋನ್‌ಮೆಂಟ್ ರೈಲ್ವೆ

✓ ಬ್ರಿಡ್ಜ್ ಮತ್ತು ಜೆ.ಸಿ ನಗರ ಪಿ.ಎಸ್ ಜಂಕ್ಷನ್‌ನಿಂದ ಹಜ್ ಕ್ಯಾಂಪ್‌ವರೆಗೆ

✓ ವಾಟಾಳ್ ನಾಗರಾಜ್ ರಸ್ತೆ

✓ ಮಲ್ಲೇಶ್ವರಂ ಮಾರ್ಗೋಸಾ ರಸ್ತೆ

✓ ಎಂ.ಕೆ.ಕೆ. ರಸ್ತೆ

✓ ಮಲ್ಲೇಶ್ವರಂ 8ನೇ ಮುಖ್ಯ ರಸ್ತೆ

✓ ಎನ್.ಆರ್.ರಸ್ತೆ : ಬಂಬೂಬಜಾರ್ ಕ್ರಾಸ್‌ನಿಂದ ಮಾರ್ಕೆಟ್ ವೃತ್ತದ ವರೆಗೆ

✓ ಆರ್.ವಿ.ರಸ್ತೆ–ಜೆ.ಸಿ.ರಸ್ತೆ : ಲಾಲ್‌ಬಾಗ್ ವೆಸ್ಟ್‌ಗೇಟ್ ಜಂಕ್ಷನ್‌ನಿಂದ ನಾಲಾ ಕ್ರಾಸ್ ವರೆಗೆ.

✓ ಆರ್.ವಿ.ರಸ್ತೆ : ಆರ್.ವಿ.ಟೀಚರ್ಸ್ ಕಾಲೇಜ್ ಜಂಕ್ಷನ್‌ನಿಂದ ಲಾಲ್‌ಭಾಗ್ ವೆಸ್ಟ್‌ಗೇಟ್ ವರೆಗೆ.

✓ ಬಿನ್ನಿಮಿಲ್ ಟ್ಯಾಂಕ್ ಬಂಡ್ ರಸ್ತೆ: ಸಿರ್ಸಿ ಜಂಕ್ಷನ್‌ನಿಂದ ಬಿನ್ನಿಮಿಲ್ ರೈಲ್ವೆ ಅಂಡರ್‌ಪಾಸ್ ವರೆಗೆ

✓ ಟಿಸಿಎಂ ರಾಯನ್ ರಸ್ತೆ : ವೆಟರ್‌ನರಿ ಆಸ್ಪತ್ರೆ ಜಂಕ್ಷನ್ ನಿಂದ ಶಾಂತಲಾ ಜಂಕ್ಷನ್ ವರೆಗೆ

✓ ಎ.ಎಸ್.ಚಾರ್ ರಸ್ತೆ : ಎ.ಎಸ್.ಆರ್.ಸ್ಟ್ರೀಟ್ ಜಂಕ್ಷನ್ ನಿಂದ ಸುಲ್ತಾನ್ ಪೇಟೆ ಕ್ರಾಸ್ ವರೆಗೆ

✓ ಜಿಟಿ ರಸ್ತೆ : ಶಾಂತಲಾ ಜಂಕ್ಷನ್ ನಿಂದ ಮೋಡಿ ರೈಲ್ವೆ ಅಂಡರ್ ಪಾಸ್ ವರೆಗೆ

✓ ಕಾಟನ್‌ಪೇಟೆ ಮುಖ್ಯ ರಸ್ತೆ : ಶಾಂತಲಾ ಜಂಕ್ಷನ್ ನಿಂದ ಬ್ರಿಯಾಂಡ್ ಜಂಕ್ಷನ್ ವರೆಗೆ

✓ ಎಸ್.ಜೆ.ಪಿ ರಸ್ತೆ : ಕೆ.ಆರ್.ಮಾರ್ಕೆಟ್ ಜಂಕ್ಷನ್ ನಿಂದ ಜಾಮೀಯಾ ಮಸೀದಿ ಜಂಕ್ಷನ್

✓ ಅವೆನ್ಯೂ ರಸ್ತೆ ರಸ್ತೆ : ಮಾರ್ಕೆಟ್ ವೃತ್ತದಿಂದ ಆಸ್ಪತ್ರೆ ರಸ್ತೆ ಜಂಕ್ಷನ್‌ವರೆಗೂ

✓ ಚಿಕ್ಕಪೇಟೆ ಮುಖ್ಯ ರಸ್ತೆ : ದೊಡ್ಡಪೇಟೆ ಜಂಕ್ಷನ್‌ನಿಂದ ಬಳೇಪೇಟೆ ಜಂಕ್ಷನ್‌ವರೆಗೂ

✓ ಬಿ.ವಿ.ಕೆ ಐಯ್ಯಂಗಾರ್ ರಸ್ತೆ : ಅಭಿನಯ ಥಿಯೇಟರ್ ಜಂಕ್ಷನ್‌ನಿಂದ ಮಾಮೂಲ್ ಪೇಟ್ ಜಂಕ್ಷನ್ ವರೆಗೆ

✓ ಹಳೆ ಮೈಸೂರು ರಸ್ತೆ : ಕೆ.ಬಿ ಜಂಕ್ಷನ್ ಬಳಿ ಇಂದ ಲೆಪ್ರಸಿ ಆಸ್ಪತ್ರೆ ಸರ್ಕಲ್ ವರೆಗೆ

✓ ಡಾ॥ ರಾಜ್‌ಕುಮಾರ್ ರಸ್ತೆ : ರಾಜಾಜಿನಗರ ಪ್ರವೇಶ ದ್ವಾರದಿಂದ ಪ್ರಸನ್ನ ವೃತ್ತ ಜಂಕ್ಷನ್ ವರೆಗೆ

✓ ಪ್ಯಾಲೇಸ್ ರಸ್ತೆ: ಮೈಸೂರು ಬ್ಯಾಂಕ್ ಜಂಕ್ಷನ್‌ನಿಂದ ಮಹಾರಾಣಿ ಕಾಲೇಜ್ ಬ್ರಿಡ್ಜ್ ಜಂಕ್ಷನ್‌ವರೆಗೆ

✓ ಕೆ.ಜಿ. ರಸ್ತೆ : ಮೈಸೂರು ಬ್ಯಾಂಕ್ ಜಂಕ್ಷನ್ ನಿಂದ ಎಲ್ಜೈಟ್ ಜಂಕ್ಷನ್‌ವರೆಗೆ

✓ ಟ್ಯಾಂಕ್‌ಬಂಡ್ ರಸ್ತೆ: ಉಪ್ಪಾರಪೇಟೆ ಪೊಲೀಸ್ ಠಾಣೆಯಿಂದ ಲಕ್ಷ್ಮಣಪುರಿ ಬ್ರಿಡ್ಜ್ ಜಂಕ್ಷನ್‌ವರೆಗೆ

✓ ಶೇಷಾದ್ರಿ ರಸ್ತೆ : ಲಕ್ಷ್ಮಣಪುರಿ ಬ್ರಿಡ್ಜ್ ನಿಂದ ಮಹಾರಾಣಿ ಕಾಲೇಜ್ ಬ್ರಿಡ್ಜ್ ಜಂಕ್ಷನ್ ವರೆಗೆ

✓ ಎಸ್.ಸಿ ರಸ್ತೆ : ಆನಂದ್ ರಾವ ಸರ್ಕಲ್ ಜಂಕ್ಷನ್ ನಿಂದ ಹಿಮಾಲಯ ಜಂಕ್ಷನ್ ವರೆಗೆ

✓ ಗಾಂಧಿನಗರ 5ನೇ ಮುಖ್ಯ ರಸ್ತೆ (ಡಬ್ಲ್ಯೂಹೆಚ್ ಹನುಮಂತಪ್ಪ ರಸ್ತೆ) : ಜನತಾ ಬಜಾರ್ ಜಂಕ್ಷನ್ ನಿಂದ ಸುಬ್ಬಣ್ಣ ಜಂಕ್ಷನ್ ವರೆಗೆ

✓ ಕಾಳಿದಾಸ ರಸ್ತೆ : ಫ್ರೀಡಂ ಪಾರ್ಕ್ ಜಂಕ್ಷನ್ ನಿಂದ ಸಾಗರ್ ಜಂಕ್ಷನ್ ವರೆಗೆ

✓ ವೈ–ರಾಮಚಂದ್ರ ರಸ್ತೆ : ವಿಜಯ ಕೆಫೆ ಜಂಕ್ಷನ್ ನಿಂದ ಪ್ಯಾಲೇಸ್ ಕ್ರಾಸ್ ಜಂಕ್ಷನ್ ವರೆಗೆ

ಈ ಸಿ.ಬಿ.ಡಿ ಏರಿಯಾಗಳಲ್ಲಿ ಏನೆಲ್ಲಾ ಅಭಿವೃದ್ಧಿ ಕಾರ್ಯಗಳಾಗಬೇಕು ಎಂಬುದರ ಬಗ್ಗೆ ವಿಸ್ತೃತವಾಗಿ ಮಾಹಿತಿಯನ್ನು ಸಿದ್ಧಪಡಿಸಿದ್ದು, ಈಗಾಗಲೇ ಸಂಬಂಧಪಟ್ಟ ಪೌರಸಂಸ್ಥೆಗಳು ಮೇಲ್ಕಂಡ ಅಭಿವೃದ್ಧಿ ಕಾರ್ಯಗಳಲ್ಲಿ ಕಾರ್ಯಪ್ರವೃತ್ತಿಗೊಂಡಿದ್ದು ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ರಾಜ್ಯದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ವಿವಿಧ ಇಲಾಖೆಗಳ ಮುಖ್ಯಸ್ಥರುಗಳೊಂದಿಗೆ ಆಗಿಂದಾಗ್ಗೆ ಸಭೆಗಳನ್ನು ಹಮ್ಮಿಕೊಂಡು ಕಾರ್ಯ ಪ್ರಗತಿಗಳನ್ನು ಪರಿಶೀಲಿಸಲಾಗುತ್ತಿದೆ.

- ಸಂಚಾರ ದಟ್ಟಣೆ/ ಸಮಸ್ಯೆಗಳು ಕಂಡುಬರುತ್ತಿರುವ ಸ್ಥಳಗಳಲ್ಲಿ ಪರಿವೀಕ್ಷಣೆ ನಡೆಸಿ ಸುಗಮ ಸಂಚಾರದ ಹಿತದೃಷ್ಟಿಯಿಂದ ನಗರದ ಹಲವಾರು ಸ್ಥಳಗಳಲ್ಲಿ ಬಲ ತಿರುವು ಹಾಗೂ ಯೂ-ತಿರುವುಗಳನ್ನು ನಿರ್ಬಂಧಿಸಲಾಗಿದೆ.

- ಬೆಂಗಳೂರು ನಗರದ ಕೇಂದ್ರ ಭಾಗದಲ್ಲಿನ ಹೆಚ್ಚು ಸಂಚಾರ ದಟ್ಟಣೆ ಇರುವ ಪ್ರದೇಶಗಳನ್ನು ಗುರುತಿಸಿ ರಸ್ತೆ ಅಗಲವಿದ್ದು, ಮುಕ್ತ ಎಡ ತಿರುವು ಅಥವಾ ಬಲ ತಿರುವು ಇರುವ ಕಡೆಗಳಲ್ಲಿ ಸಂಚಾರ ಪರಿಕರಗಳನ್ನು (Street Furniture) ಅಳವಡಿಸಿ ಪಥಶಿಸ್ತನ್ನು ಜಾರಿ ಮಾಡಿದ ಕಾರಣ ನಿರೀಕ್ಷೆಗೂ ಮೀರಿ ಅಪಘಾತಗಳ ಸಂಖ್ಯೆಯು ಇಳಿಮುಖವಾಗುವುದಕ್ಕೆ ಕಾರಣವಾಗಿರುತ್ತದೆ ಹಾಗೂ ಸಂಚಾರವೂ ಸಹ ಸುಗಮಗೊಂಡಿರುತ್ತದೆ.

- ಪಿ.ಡಿ.ಎ (ಪರ್ಸನಲ್ ಡಿಜಿಟಲ್ ಅಸಿಸ್ಟೆಂಟ್) ಉಪಕರಣಗಳನ್ನು ಎ.ಎಸ್.ಐ, ಪಿ.ಎಸ್.ಐ ಮತ್ತು ಪಿ.ಐ ಹಂತದವರೆಗಿನ ಅಧಿಕಾರಿಗಳಿಗೆ ಹಂಚಿಕೆ ಮಾಡಲಾಗಿದ್ದು, ಇದರ ಮೂಲಕ ಸಂಚಾರ ನಿಯಮಗಳನ್ನು ಉಲ್ಲಂಘಿಸುವ ಚಾಲಕರುಗಳ ವಿರುದ್ಧ ಸ್ಥಳದಲ್ಲೇ ಸಂಚಾರ ಪೊಲೀಸ್ ಅಧಿಕಾರಿಗಳು ಪ್ರಕರಣಗಳನ್ನು ದಾಖಲಿಸಿ ಸ್ಥಳದಂಡವನ್ನು ಪಾವತಿಸಿಕೊಳ್ಳುವ ವ್ಯವಸ್ಥೆ ಕಲ್ಪಿಸಲಾಗಿದೆ.

- ಬೆಂಗಳೂರು ನಗರದ 107 ಪ್ರಮುಖ ರಸ್ತೆಗಳನ್ನು ಗುರುತಿಸಿ ಝೀರೋ ಟಾಲರೆನ್ಸ್ ರಸ್ತೆ ಎಂಬುದಾಗಿ ಜಾರಿ ಮಾಡಲಾಗಿರುತ್ತದೆ. ಅಂತಹ ರಸ್ತೆಗಳಲ್ಲಿ ಯಾವುದೇ ರೀತಿಯ ಅನಧಿಕೃತ ವಾಹನ ನಿಲುಗಡೆ, ತಪ್ಪು ವಾಹನ ನಿಲುಗಡೆ ಹಾಗೂ ಫುಟ್‌ಪಾತ್ ಮೇಲೆ ವಾಹನ ನಿಲುಗಡೆಗಳಾಗದಂತೆ ಸಂಚಾರ ಅಧಿಕಾರಿಗಳ ಗಸ್ತುಗಳನ್ನು ನಿರ್ವಹಿಸಲಾಗಿರುತ್ತದೆ.

- ಬೆಂಗಳೂರು ನಗರದ ರಸ್ತೆಗಳಲ್ಲಿ ಭಾರೀ ಸರಕು ಸಾಗಣೆ ವಾಹನಗಳಿಂದ ಸಂಚಾರ ಸಮಸ್ಯೆಗಳು ಕಂಡುಬಂದಿದ್ದ ಕಾರಣ ಬೆಂಗಳೂರು ನಗರದ ಪೊಲೀಸ್ ಆಯುಕ್ತರ ಸರಹದ್ದಿಗೆ ಒಳಪಡುವ ಎಲ್ಲಾ ರಸ್ತೆಗಳಲ್ಲಿಯೂ ಸರಕು ಸಾಗಣೆ ವಾಹನಗಳು ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 04.00 ಗಂಟೆಯವರೆಗೆ ಹಾಗೂ ರಾತ್ರಿ 10.00 ಗಂಟೆಯಿಂದ ಬೆಳಿಗ್ಗೆ 07.00 ಗಂಟೆಯವರೆಗೆ ಸಂಚರಿಸುವಂತೆ ಹಾಗೂ ಬೆಳಿಗ್ಗೆ 07.00 ಗಂಟೆಯಿಂದ 11.00 ಗಂಟೆಯವರೆಗೆ ಹಾಗೂ ಸಂಜೆ 04.00 ಗಂಟೆಯಿಂದ ರಾತ್ರಿ 10.00 ಗಂಟೆಯವರೆಗೆ ಪೊಲೀಸ್ ಆಯುಕ್ತರ ಸರಹದ್ದಿಗೆ ಒಳಪಡುವ ಎಲ್ಲಾ ರಸ್ತೆಗಳಲ್ಲಿಯೂ ಸರಕು ಸಾಗಣೆ ವಾಹನಗಳ ಪ್ರವೇಶವನ್ನು ನಿರ್ಬಂಧಿಸಲಾಗಿದೆ.

- ಪೀಕ್ ಅವರ್ಸ್‌ಗಳಲ್ಲಿ ಬೆಂಗಳೂರು ನಗರದ ಎಲ್ಲಾ ಜಂಕ್ಷನ್ ಮತ್ತು ರಸ್ತೆಗಳಲ್ಲಿ ಸಂಚಾರ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳು ಸಂಚಾರ ನಿರ್ವಹಣೆಯಲ್ಲಿ ತೊಡಗಿಕೊಂಡು ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡುತ್ತಾರೆ.

- ಪ್ರತಿಯೊಂದು ಸಂಚಾರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಒಂದೊಂದು ಪ್ರಮುಖ ರಸ್ತೆಗಳನ್ನು ಗುರುತಿಸಿ ಮಾದರಿ ರಸ್ತೆಯನ್ನಾಗಿ ಅಳವಡಿಸಿಕೊಳ್ಳಲಾಗಿದೆ ಹಾಗೂ ಇಂತಹ ಮಾದರಿ ರಸ್ತೆಗಳಲ್ಲಿ ಯಾವುದೇ ರೀತಿಯ ಸಂಚಾರ ಸಮಸ್ಯೆಗಳು ಸಂಭವಿಸದಂತೆ ಹಾಗೂ ರಸ್ತೆ ಸುರಕ್ಷತೆ ಕಟ್ಟುನಿಟ್ಟಾಗಿ ಜಾರಿ ಮಾಡಲಾಗಿದೆ.

- ಬೆಂಗಳೂರು ನಗರದಾದ್ಯಂತ ಅವೈಜ್ಞಾನಿಕ ಹಾಗೂ ಅನಧಿಕೃತವಾಗಿ ನಿರ್ಮಿಸಲಾಗಿದ್ದ ರಸ್ತೆ ಉಬ್ಬುಗಳನ್ನು ತೆರವುಗೊಳಿಸಲಾಗಿದೆ. ಪ್ರಮುಖ ರಸ್ತೆಗಳಲ್ಲಿ ವಾಹನದ ವೇಗವನ್ನು ನಿಯಂತ್ರಿಸಿ ಅಪಘಾತಗಳನ್ನು ತಡೆಯುವ ಸಲುವಾಗಿ ಹಾಗೂ ಅವಶ್ಯಕವಿರುವ ಸ್ಥಳಗಳಲ್ಲಿ ಮಾತ್ರವೇ ಐ.ಆರ್.ಸಿ ಮಾದರಿಯಲ್ಲಿ ವೈಜ್ಞಾನಿಕವಾಗಿ ರಸ್ತೆ ಉಬ್ಬುಗಳನ್ನು ನಿರ್ಮಿಸಲಾಗಿದೆ.
- ಪ್ರತಿ ಸಂಚಾರ ಪೊಲೀಸ್ ಠಾಣಾ ಮಟ್ಟದಲ್ಲಿ ಪ್ರತಿ ತಿಂಗಳ 3ನೇ ಶನಿವಾರಗಳಂದು ನಾಗರೀಕ ಸಂಚಾರ ವೇದಿಕೆ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದ್ದು, ಆಯಾ ಸಂಚಾರ ಠಾಣಾ ವ್ಯಾಪ್ತಿಯ ನಾಗರೀಕರು ತಮ್ಮ ಸಂಚಾರ ಸಮಸ್ಯೆಗಳನ್ನು ಠಾಣಾ ಮಟ್ಟದಲ್ಲಿ ಪರಿಹರಿಸಿಕೊಳ್ಳುವ ವೇದಿಕೆಯನ್ನು ಸೃಜಿಸಲಾಗಿದೆ.
- ಬೆಂಗಳೂರು ನಗರದಲ್ಲಿ ಸಂಚಾರ ಸಮಸ್ಯೆಗಳನ್ನು ಪರಿಹರಿಸಲು ಹಾಗೂ ಸುಗಮ ಸಂಚಾರ ಜಾರಿ ಮಾಡಲು ಮತ್ತು ರಸ್ತೆಯಲ್ಲಿ ಸುರಕ್ಷತೆಯನ್ನು ಜಾರಿ ಮಾಡಲು ಹಲವಾರು ಕ್ರಮಗಳನ್ನು, ಆಂದೋಲನಗಳನ್ನು ಹಾಗೂ ವೃತ್ತಿಪರ ಚಾಲಕರುಗಳಿಗೆ ಹಲವಾರು ತರಬೇತಿ ಹಾಗೂ ರಸ್ತೆ ಸುರಕ್ಷತೆಯ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಡೆಸುತ್ತಿದ್ದು ರಸ್ತೆ ಸುರಕ್ಷತೆಯನ್ನು ಅತ್ಯುತ್ತಮ ರೀತಿಯಲ್ಲಿ ಜಾರಿ ಮಾಡಲಾಗಿದೆ.
- ಪೀಕ್ ಅವರ್‌ಗಳಲ್ಲಿ ಸಂಚಾರ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳು ಸಂಚಾರ ನಿರ್ವಹಣೆಯಲ್ಲಿ ತೊಡಗಿಕೊಂಡಿರುವ ಕಾರಣ ಅಂತಹ ಸಂದರ್ಭದಲ್ಲಿ ಕಣ್ಗಾವಲು ಹಾಗೂ ಡಿಜಿಟಲ್ ಕ್ಯಾಮರಾಗಳ ಮೂಲಕ ಉಲ್ಲಂಘನೆ ಎಸಗುವ ವಾಹನಗಳ ಛಾಯಾಚಿತ್ರವನ್ನು ಸೆರೆಹಿಡಿದು ಅವರುಗಳ ವಿರುದ್ಧ ಐ.ಎಂ.ವಿ 133 ನೋಟಿಸ್‌ಗಳನ್ನು ಕಳುಹಿಸಿ ದಂಡ ಪಾವತಿಸಿಕೊಳ್ಳಲಾಗುತ್ತಿದೆ.
- ನಗರದ ರಸ್ತೆಗಳಲ್ಲಿ ಸಂಚಾರ ಸಮಸ್ಯೆಗಳಿಗೆ ಪ್ರಮುಖ ಕಾರಣವಾಗಿರುವ ವಾಹನಗಳ ಅನಧಿಕೃತ, ತಪ್ಪು ನಿಲುಗಡೆ ಹಾಗೂ ಫುಟ್‌ಪಾತ್ ಮೇಲೆ ವಾಹನ ನಿಲುಗಡೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗಿದೆ.
- ಬೆಂಗಳೂರು ನಗರದಾದ್ಯಂತ ಸಮಾನ ವೇಗಮಿತಿಯನ್ನು ಜಾರಿಗೊಳಿಸಲಾಗಿದ್ದು ಅತಿ ವೇಗವಾಗಿ ಚಲಿಸುವವರ ವಿರುದ್ಧವೂ ಸಹ ಕಟ್ಟು ನಿಟ್ಟಿನ ಕ್ರಮಗಳನ್ನು ಜರುಗಿಸಲಾಗಿದೆ. ಬೆಂಗಳೂರು ನಗರ ಸಂಚಾರ ವಿಭಾಗದಲ್ಲಿ ಒಟ್ಟು 13 ಇಂಟರ್‌ಸೆಪ್ಟರ್ ವಾಹನಗಳು ಕಾರ್ಯ ನಿರ್ವಹಿಸುತ್ತಿವೆ.
- ಇದೇ ರೀತಿ ಅಡ್ಡಾ ದಿಡ್ಡಿಯಾಗಿ ವಾಹನ ಚಾಲನೆ ಮಾಡುವವರ ವಿರುದ್ಧ ಅಪಾಯಕಾರಿ ಚಾಲನೆ (Dangerous Driving) ಪ್ರಕರಣಗಳನ್ನು ದಾಖಲಿಸುತ್ತಿದೆ.
- ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವವರನ್ನು ಪತ್ತೆ ಮಾಡಲು ಅತ್ಯಾಧುನಿಕ ಆಲ್ಕೋಮೀಟರ್‌ಗಳನ್ನು ಖರೀದಿಸಲಾಗಿದ್ದು, ಅವುಗಳ ಮೂಲಕ ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುತ್ತಿರುವವರನ್ನು ಪತ್ತೆ ಮಾಡಲಾಗುತ್ತಿದೆ. ಬೆಂಗಳೂರು ನಗರ ಸಂಚಾರ ಪೊಲೀಸ್ ವಿಭಾಗವು ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವವರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಂಡಿರುತ್ತದೆ.
- ಬೆಂಗಳೂರು ನಗರ ರಸ್ತೆಗಳಲ್ಲಿ ಪಥ ಶಿಸ್ತು ನಿಯಮಗಳನ್ನು ಉಲ್ಲಂಘಿಸುವ ವಾಹನ ಚಾಲಕರುಗಳಿಗೆ ಕಠಿಣ ನಿಯಮಗಳ ಜಾರಿಯ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

- ಡ್ರ್ಯಾಗ್ ರೇಸಿಂಗ್ ಮತ್ತು ವೀಲಿಂಗ್ ಮತ್ತು ಅಡ್ಡಾದಿಡ್ಡಿ ವಾಹನ ಚಾಲನೆ ಮಾಡುವುದನ್ನು ತಡೆಯಲು ಶಾಲಾ ಕಾಲೇಜು, ವಾಣಿಜ್ಯ ಮಳಿಗೆ ಹಾಗೂ ಪ್ರಮುಖ ಸ್ಥಳಗಳಲ್ಲಿ ಕೋಬ್ರಾ ಹಾಗೂ ಸಂಚಾರ ಪೊಲೀಸರ ಗಸ್ತುಗಳನ್ನು ಏರ್ಪಡಿಸಲಾಗಿದೆ. ವೀಲಿಂಗ್/ಡ್ರ್ಯಾಗ್ ರೇಸ್‌ನಲ್ಲಿ ತೊಡಗಿಸಿಕೊಂಡಿರುವವರ ಐ.ಎಂ.ವಿ. ಹಾಗೂ ಐ.ಪಿ.ಸಿ. ಕಾಯ್ದೆ ರೀತ್ಯಾ ಪ್ರಕರಣಗಳನ್ನು ದಾಖಲಿಸಲಾಗುತ್ತಿರುತ್ತದೆ.

- ಸಂಚಾರ ನಿರ್ವಹಣಾ ಕೇಂದ್ರವು (ಟಿ.ಎಂ.ಸಿ) ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಬೆಂಗಳೂರು ನಗರದಾದ್ಯಂತ ಅಳವಡಿಸಲಾಗಿರುವ ಕಣ್ಗಾವಲು ಕ್ಯಾಮರಾದ ಮೂಲಕ ಟಿ.ಎಂ.ಸಿ.ಯಲ್ಲಿ ಅಳವಡಿಸಲಾಗಿರುವ ವಿಡಿಯೋವಾಲ್‌ನ ಮುಖಾಂತರ ಸಂಚಾರ ದಟ್ಟಣೆಯನ್ನು ನಿವಾರಿಸುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಲಾಗಿದೆ. 26 ಕಾರಿಡಾರ್‌ಗಳಲ್ಲಿ ಎರಡು ಪಾಳಿಯಲ್ಲಿ ನಿತ್ಯ ಕ್ಯಾಮರಾ ವೀಕ್ಷಿಸಿ ಜಂಕ್ಷನ್‌ಗಳಲ್ಲಿನ ಸಂಚಾರದ ದಟ್ಟಣೆಯನ್ನು ಪರಿಶೀಲಿಸಿ, ಸಿಗ್ನಲ್ ಲೈಟ್‌ನ ಸಮಯವನ್ನು ಟಿ.ಎಂ.ಸಿ.ಯಿಂದಲೇ ಬದಲಾವಣೆ ಮಾಡುವ ಮೂಲಕ ಸಂಚಾರದ ಒತ್ತಡವನ್ನು ಕಡಿಮೆ ಮಾಡಿ ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ಬೆಂಗಳೂರು ನಗರ ಸಂಚಾರ ವಿಭಾಗದ ಪೊಲೀಸ್ ವೆಬ್‌ಸೈಟ್ ಅನ್ನು ಪ್ರತಿ ನಿತ್ಯ ಸಮಗ್ರ ಮಾಹಿತಿಗಳೊಂದಿಗೆ ಇಲ್ಲಿಯೇ ಅಪ್‌ಡೇಟ್ ಮಾಡಲಾಗುತ್ತಿರುತ್ತದೆ ಹಾಗೂ ನಗರದಲ್ಲಿ ಅಳವಡಿಸಲಾಗಿರುವ ಸಿಗ್ನಲ್‌ಲೈಟ್, ವಿ.ಎಂ.ಎಸ್, ಸರ್ವಿಲನ್ಸ್ ಕ್ಯಾಮರಾ ಇನ್ನಿತರೆ ತಾಂತ್ರಿಕ ಉಪಕರಣಗಳ ನಿಯಂತ್ರಣವನ್ನು ಮಾಡಬಹುದಲ್ಲದೆ, ಸಂದರ್ಭಕ್ಕೆ ತಕ್ಕಂತೆ ಮಾರ್ಪಾಡುಗಳನ್ನು ಮಾಡುವ ತಂತ್ರಜ್ಞಾನವನ್ನು ಒಳಗೊಂಡಿರುತ್ತದೆ.

- 10 ಜಂಕ್ಷನ್‌ಗಳಲ್ಲಿ ಆರ್.ಎಲ್.ವಿ.ಡಿ (Red Light Violation Detection) ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು ಸಿಗ್ನಲ್ ಜಂಪಿಂಗ್ ಮತ್ತು ಲೇನ್ ಡಿಸಿಪ್ಲಿನ್ ಉಲ್ಲಂಘನೆಗಳನ್ನು ಸ್ವಯಂಚಾಲಿತವಾಗಿ ಗುರ್ತಿಸುವ ಕ್ಷಮತೆಯನ್ನು ಹೊಂದಿರುವ ಸೌಲಭ್ಯವನ್ನು ಉಲ್ಲಂಘನೆ ಪ್ರಕರಣಗಳನ್ನು ದಾಖಲಿಸಲು ಬಳಸಿಕೊಳ್ಳಲಾಗುತ್ತಿದೆ.

ಕ್ರಸಂ	ಸಂಚಾರ ಪೊಲೀಸ್ ಠಾಣೆ	ಕ್ಯಾಮೆರಾ ಅಳವಡಿಸಿರುವ ಜಂಕ್ಷನ್
1	ಕೆ.ಆರ್. ಪುರಂ ಸಂ.ಪೊ.ಠಾಣೆ	ಕೆ.ಆರ್. ಪುರಂ ಜಂಕ್ಷನ್
2	ಕಬ್ಬನ್‌ಪಾರ್ಕ್ ಸಂ.ಪೊ.ಠಾಣೆ	ಎಂ.ಜಿ. ರಸ್ತೆ ಜಂಕ್ಷನ್
3	ಯಲಹಂಕ ಸಂ.ಪೊ.ಠಾಣೆ	ಯಲಹಂಕ ಜಂಕ್ಷನ್
4	ಅಶೋಕನಗರ ಸಂ.ಪೊ.ಠಾಣೆ	ಈಜಿಪುರ ಜಂಕ್ಷನ್
5	ಎಲೆಕ್ಟ್ರಾನಿಕ್ ಸಿಟಿ ಸಂ.ಪೊ.ಠಾಣೆ	ಎಲೆಕ್ಟ್ರಾನಿಕ್ ಸಿಟಿ ಜಂಕ್ಷನ್
6	ಹೈಗ್ರೌಂಡ್ಸ್ ಸಂ.ಪೊ.ಠಾಣೆ	ಚಂದ್ರಿಕಾ ಜಂಕ್ಷನ್
7	ಆಡುಗೋಡಿ ಸಂ.ಪೊ.ಠಾಣೆ	ಆಡುಗೋಡಿ ಜಂಕ್ಷನ್
8	ವಿಲ್ಸನ್‌ಗಾರ್ಡನ್ ಸಂ.ಪೊ.ಠಾಣೆ	ಶಾಂತಿನಗರ ಜಂಕ್ಷನ್
9	ಹಲಸೂರು ಸಂ.ಪೊ.ಠಾಣೆ	ಎ.ಎಸ್.ಸಿ ಜಂಕ್ಷನ್
10	ಬ್ಯಾಟರಾಯನಪುರ ಸಂ.ಪೊ.ಠಾಣೆ	ಪಿ.ಇ.ಎಸ್.ಐ.ಟಿ ಜಂಕ್ಷನ್

2

- ➢ ನಗರದ ಸಂಚಾರ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಬಾಡಿವೋರ್ನ್ ಕ್ಯಾಮೆರಾಗಳನ್ನು ವಿತರಿಸಲಾಗಿದ್ದು, ಇದರಿಂದಾಗಿ ಪರಿಣಾಮಕಾರಿಯಾಗಿ ನಿಯಮ ಜಾರಿಗೊಳಿಸಲು ಸಾಧ್ಯವಾಗುತ್ತಿದೆ.

- ➢ ಸಾರ್ವಜನಿಕರನ್ನು ಸಹ ಪರಿಣಾಮಕಾರಿಯಾಗಿ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳನ್ನು ದಾಖಲಿಸುವ ನಿಟ್ಟಿನಲ್ಲಿ ಬಳಸಿಕೊಳ್ಳಲಾಗುತ್ತಿದ್ದು ಪಬ್ಲಿಕ್ ಐ, ಐ ಚೇಂಜ್ ಮೈ ಸಿಟಿ ಆ್ಯಪ್‌ಗಳ ಜೊತೆಗೆ ಫೇಸ್ ಬುಕ್, ಜಿ-ಮೇಲ್ ನಂತಹ ಸಾಮಾಜಿಕ ಜಾಲತಾಣವನ್ನು ಸಹ ಬಳಸಿಕೊಳ್ಳಲಾಗುತ್ತಿದೆ.

- ➢ ಜಂಕ್ಷನ್‌ಗಳಲ್ಲಿ ಸಿಗ್ನಲ್ ಜಂಪಿಂಗ್ ಮಾಡಿ ಸಂಚಾರ ನಿಯಮ ಉಲ್ಲಂಘಿಸಿದವರ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿದೆ.

- ➢ ಸಂಚಾರ ವಿಭಾಗದಲ್ಲಿ ಸಿಬ್ಬಂದಿಯ ಕೊರತೆ ಇದ್ದುದರಿಂದ ಸರ್ಕಾರದ ಮಂಜೂರಾತಿ ಪಡೆದು ಗೃಹ ರಕ್ಷಕ ದಳದ ಸಿಬ್ಬಂದಿಯನ್ನು ಸಂಚಾರ ನಿಯಂತ್ರಣ ಮತ್ತು ನಿರ್ವಹಣೆಗೆ ಬಳಸಿಕೊಳ್ಳಲಾಗುತ್ತಿದೆ.

- ➢ ಬೆಂಗಳೂರು ನಗರ ಸಂಚಾರ ವಾರ್ಡನ್ ಸಂಸ್ಥೆ ಇದ್ದು, ಸಂಚಾರ ವಾರ್ಡನ್‌ಗಳನ್ನು ಸಹ ಸಂಚಾರ ನಿಯಂತ್ರಣಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ.

- ➢ ಸಾರ್ವಜನಿಕರಿಗೆ ಪಥ ಶಿಸ್ತು ಪಾಲನೆಯ ಬಗ್ಗೆ ಠಾಣಾ ಮತ್ತು ವಿಭಾಗೀಯವಾಗಿ ಹಲವಾರು ಕಡೆ ವಿಶೇಷ ಉಪನ್ಯಾಸವನ್ನು ಏರ್ಪಡಿಸಿ ಈ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.

- ➢ ಸಾಮಾಜಿಕ ಜಾಲತಾಣಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು, ದೈನಂದಿನ ದಿನಪತ್ರಿಕೆಗಳಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸುವ ಭಿತ್ತಿ ಚಿತ್ರಗಳನ್ನು ಹಾಗೂ ಛಾಯಾ ಚಿತ್ರಗಳನ್ನು ಮುದ್ರಿಸಿ ಮತ್ತು ಆಂದೋಲನಗಳ ಮುಖೇನ ಪಥ ಶಿಸ್ತು ಪಾಲನೆಯ ಗುರಿ ಮತ್ತು ಉದ್ದೇಶಗಳನ್ನು ಸಾರ್ವಜನಿಕರಿಗೆ ಮನದಟ್ಟು ಮಾಡಲಾಗುತ್ತಿದೆ.

- ➢ ಸಂಚಾರ ನಿರ್ವಹಣಾ ಕೇಂದ್ರದಲ್ಲಿ ಪ್ರತಿದಿನ ವಿದ್ಯಾರ್ಥಿಗಳು, ಪೋಷಕರು, ಆಟೋರಿಕ್ಷಾ, ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಮತ್ತು ಕ್ಯಾಬ್ ಚಾಲಕರುಗಳು ವೀಕ್ಷಣೆಗೆ ಬರುತ್ತಿದ್ದು ಅವರುಗಳಿಗೆ ಪಥ ಶಿಸ್ತು ಪಾಲನೆಯ ಬಗ್ಗೆ ವಿಡಿಯೋ ತುಣುಕುಗಳನ್ನು ತೋರಿಸುವುದರ ಮೂಲಕ ಹಾಗೂ ಉಪನ್ಯಾಸಗಳ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ.

ಬೆಂಗಳೂರು ನಗರದ ಥಣಿಸಂದ್ರದಲ್ಲಿರುವ ಸಂಚಾರ ತರಬೇತಿ ಮತ್ತು ರಸ್ತೆ ಸುರಕ್ಷತಾ ಸಂಸ್ಥೆಯಲ್ಲಿ ಸಹ ವೃತ್ತಿಪರ ಚಾಲಕರುಗಳಿಗೆ ಹಾಗೂ ಶಾಲಾ ವಾಹನಗಳ ಚಾಲಕರಿಗೆ ವಿಶೇಷವಾದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ತನ್ಮೂಲಕ ಅರಿವು ಮೂಡಿಸುವ ಉದ್ದೇಶವನ್ನು ಸಫಲಗೊಳಿಸಲಾಗುತ್ತಿದೆ.

ಅನುಬಂಧ - ಓ.

ಸಂಖ್ಯೆ:29/ಮೆಮೋ/ಜಂಟಿ.ಸಿಪಿ(ಸಂ)/2021

ಬೆಂಗಳೂರು ನಗರ
ಸಂಚಾರ ಪೊಲೀಸ್

ಜಂಟಿ ಪೊಲೀಸ್ ಆಯುಕ್ತರವರ ಕಛೇರಿ,
ಸಂಚಾರ ವಿಭಾಗ, ನಂ.1, ಇನ್‌ಫೆಂಟ್ರಿ ರಸ್ತೆ,
ಬೆಂಗಳೂರು ನಗರ.
ದಿನಾಂಕ: 10/04/2021

ವಿಷಯ:- ಕೋವಿಡ್-19 ಸಾಂಕ್ರಾಮಿಕ ರೋಗದ 2ನೇ ಅಲೆಯ ಸವಾಲಿನ ಹಿನ್ನೆಲೆಯಲ್ಲಿ ಸಂಚಾರ ಪೊಲೀಸ್ ಕರ್ತವ್ಯ ನಿರ್ವಹಣೆ ಮಾಡುವಲ್ಲಿ ಅನುಸರಿಸಬೇಕಾದ ಗುಣಮಟ್ಟದ ಪರಿಷ್ಕೃತ ಕಾರ್ಯನಿರ್ವಹಣಾ ವಿಧಾನಗಳು.

ಕೋವಿಡ್-19 ಸಾಂಕ್ರಾಮಿಕ ರೋಗದ ಎರಡನೇ ಅಲೆಯು ಕರ್ನಾಟಕ ಸೇರಿದಂತೆ ಇಡೀ ಭಾರತ ದೇಶದಲ್ಲಿ ಹೆಚ್ಚಾಗುತ್ತಿದ್ದು, ಗಣನೀಯ ಪ್ರಮಾಣದಲ್ಲಿ ಸಂಚಾರ ಪೊಲೀಸರಿಗೆ ಸೋಂಕು ಉಂಟಾಗಿದ್ದು, ಇದು ಕಳವಳಕಾರಿ ಸಂಗತಿಯಾಗಿದೆ. ಆದರೆ ಯಾರೂ ಈ ಬಗ್ಗೆ ಆತಂಕ ಪಡುವ ಅಗತ್ಯವಿಲ್ಲ. ಕೋವಿಡ್ ಮಹಾಮಾರಿಯು ಬರದಂತೆ ಮುಂಜಾಗ್ರತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಿದಲ್ಲಿ ಇದರ ಹಬ್ಬುವಿಕೆಯನ್ನೂ ಸಹ ಪರಿಣಾಮಕಾರಿಯಾಗಿ ತಡೆಗಟ್ಟಬಹುದಾಗಿದೆ. "ಭಯ ಬೇಡ, ಎಚ್ಚರಿಕೆ ಅತ್ಯಗತ್ಯ" ಕೋವಿಡ್ ಹಬ್ಬುವಿಕೆ ತಡೆಗಟ್ಟುವಲ್ಲಿ ನಮ್ಮ ಧ್ಯೇಯ ವಾಕ್ಯವಾಗಲಿ.

ಕೋವಿಡ್ ವೈರಾಣುವಿನ ಸೋಂಕು ಹರಡುವಿಕೆಯು ನಮ್ಮ ಇಲಾಖೆಗೆ ಒಂದು ಸವಾಲಾಗಿ ಪರಿಣಮಿಸಿದೆ. ಪ್ರಥಮ ಅಲೆಯ ಸೋಂಕಿನ ನಿಯಂತ್ರಣಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಘೋಷಿಸಿದ ಲಾಕ್‌ಡೌನ್ ಅನ್ನು ಈಗಾಗಲೇ ಸಂಪೂರ್ಣವಾಗಿ ತೆರವುಗೊಳಿಸಿದ್ದು ಇದರಿಂದ ಸಾರ್ವಜನಿಕರ ಮುಕ್ತ ಓಡಾಟದಿಂದ ದೈನಂದಿನ ಕರ್ತವ್ಯ ನಿರ್ವಹಿಸುವ ಪೊಲೀಸರು ಸಾರ್ವಜನಿಕರ ಸಂಪರ್ಕಕ್ಕೆ ಬರುವುದರಿಂದ ಕೋವಿಡ್-19ನೇ ಎರಡನೇ ಅಲೆಯ ಸೋಂಕು ಹರಡುವಿಕೆಯ ಸಾಧ್ಯತೆ ಹೆಚ್ಚಾಗಿರುತ್ತದೆ. ಇಂತಹ ಒಂದು ಸವಾಲಿನ ಪರಿಸ್ಥಿತಿಯಲ್ಲಿ ಪೊಲೀಸ್ ಇಲಾಖೆಯು ಹಗಲಿರುಳೆನ್ನದೆ ವೈದ್ಯಕೀಯ ಇಲಾಖೆಗೆ ಸಹಾಯಕವಾಗಿ ಕಾರ್ಯನಿರ್ವಹಿಸುತ್ತಿದ್ದು, ದೈನಂದಿನ ಪೊಲೀಸ್ ಕರ್ತವ್ಯಗಳ ಜೊತೆಗೆ ಕೋವಿಡ್ ಶಂಕಿತ ವ್ಯಕ್ತಿಗಳ ಸ್ಕ್ರೀನಿಂಗ್, ಕ್ವಾರಂಟೈನ್, ಪ್ರಾಥಮಿಕ ಹಾಗೂ ದ್ವಿತೀಯ ಸಂಪರ್ಕಿತರ ಪತ್ತೆ ಹಚ್ಚುವಿಕೆಗೆ ಸಹಕರಿಸುವುದು ಹಾಗೂ ವೈದ್ಯಕೀಯ ಪಡೆಯದ ಅಧಿಕಾರಿ ಮತ್ತು ಸಿಬ್ಬಂದಿಯವರಿಗೆ ರಕ್ಷಣೆ ಒದಗಿಸುವ ಕಾರ್ಯವನ್ನು ನಿರಂತರವಾಗಿ ಮಾಡುತ್ತಿದೆ.

ಈ ಹಿನ್ನೆಲೆಯಲ್ಲಿ ಪೊಲೀಸರು ಸಂಚಾರ ನಿರ್ವಹಣೆ ಬಂದೋಬಸ್ತ್ ಕರ್ತವ್ಯ, ವಿ.ಐ.ಪಿ ಬಂದೋಬಸ್ತ್, ಅರ್ಜಿವಿಚಾರಣೆ, ಪ್ರಕರಣಗಳ ತನಿಖೆ, ಆರೋಪಿಗಳ ದಸ್ತಗಿರಿ ಹಾಗೂ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವುದು, ಅಪಘಾತ ಸಾವಿನ ಪ್ರಕರಣಗಳ ತನಿಖೆ, ಅಸ್ವಾಭಾವಿಕ ಸಾವಿನ ಪ್ರಕರಣಗಳ ತನಿಖೆ, ಪ್ರೋಸೆಸ್ ಜಾರಿ ಹಾಗೂ ಆಡಳಿತಾತ್ಮಕ ಕೆಲಸಗಳಿಗಾಗಿ ಪೊಲೀಸರು ಹಾಗೂ ಸಾರ್ವಜನಿಕರು ಪೊಲೀಸ್ ಠಾಣೆ/ಎಸಿಪಿ ಕಛೇರಿ/ಡಿಸಿಪಿ ಕಛೇರಿಗೆ ಕಚೇರಿಗಳಿಗೆ ಭೇಟಿ ನೀಡುವುದು, ಸಂಚಾರ ವಿಭಾಗಕ್ಕೆ ಸಂಬಂಧಿಸಿದಂತೆ ವಾಹನಗಳ ತಪಾಸಣೆ, ಐ.ಎಂ.ವಿ ಪ್ರಕರಣಗಳನ್ನು ದಾಖಲಿಸುವುದು, ಸ್ಥಳ ದಂಡ ವಸೂಲಾತಿ, ಅಪಘಾತ ಪ್ರಕರಣಗಳಲ್ಲಿ ಗಾಯಾಳುಗಳನ್ನು ಹಾಗೂ ಮೃತರನ್ನು ಸ್ಥಳಾಂತರಿಸುವುದು ಹಾಗೂ ವಾಹನಗಳನ್ನು ತೆರವುಗೊಳಿಸಿ ಸಂಚಾರವನ್ನು ಮುಕ್ತಗೊಳಿಸುವುದು, ಇತ್ಯಾದಿ ದೈನಂದಿನ ಪೊಲೀಸ್ ಕರ್ತವ್ಯಗಳನ್ನು ನಿರ್ವಹಿಸುವಾಗ ಹಲವಾರು ಜನರೊಂದಿಗೆ ಸಂಪರ್ಕಕ್ಕೆ ಬರುವುದರಿಂದ ಮುಂದಿನ ದಿನಗಳಲ್ಲಿ ಆದಷ್ಟು ಮಟ್ಟಿಗೆ ಸಾರ್ವಜನಿಕರೊಂದಿಗೆ ನೇರ ಸಂಪರ್ಕಕ್ಕೆ ಬರುವುದನ್ನು ತಪ್ಪಿಸಲು ಯಾವೆಲ್ಲಾ ರೀತಿಯ ವಿಧಾನಗಳನ್ನು ಅಳವಡಿಸಿಕೊಳ್ಳಬಹುದು ಹಾಗೂ ಅನಿವಾರ್ಯ

ಸಂದರ್ಭಗಳಲ್ಲಿ, ಸಾರ್ವಜನಿಕರೊಂದಿಗೆ ಸಂಪರ್ಕಕ್ಕೆ ಬರುವ ಸಂದರ್ಭದಲ್ಲಿ ಯಾವ ರೀತಿ ಮುನ್ನೆಚ್ಚರಿಕೆ ಕ್ರಮಗಳನ್ನು ಅಳವಡಿಸಿಕೊಂಡು ಪೊಲೀಸರು ಕರ್ತವ್ಯ ನಿರ್ವಹಿಸಬೇಕು ಎಂಬುದರ ಬಗ್ಗೆ ಮಾರ್ಗಸೂಚಿಗಳನ್ನು ತಯಾರಿಸಲಾಗಿದ್ದು, ಕೊರೋನಾ ವೈರಸ್ ಹರಡುವಿಕೆಯನ್ನು ತಡೆಗಟ್ಟುವ ಕುರಿತು ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳ ಪಾತ್ರ, ಹಾಗೂ ಸ್ವಯಂ ಮುಂಜಾಗ್ರತಾ ಹಾಗೂ ಅನುಸರಿಸುವ ಕ್ರಮಗಳು ಈ ಕೆಳಗಿನಂತಿರುತ್ತವೆ.

1. ಕೋವಿಡ್-19 ಎರಡನೇ ಅಲೆಗೆ ಸಂಬಂಧಿಸಿದಂತೆ ಮಾಹಿತಿ

- ಕೋವಿಡ್ ಎರಡನೇ ಅಲೆ ಎಂದರೆ ನಾವೆಲ್ ಕೊರೋನಾ ವೈರಸ್ ಮೂಲಕ ಹರಡುವ ಒಂದು ಸಾಂಕ್ರಾಮಿಕ ರೋಗವಾಗಿದೆ.
- ಕೋವಿಡ್ ಸೋಂಕಿತ ರೋಗಿಯು ಸಾಮಾನ್ಯವಾಗಿ ಜ್ವರ, ಗಂಟಲು ನೋವು, ಕೆಮ್ಮು ಮತ್ತು ಉಸಿರಾಟದಲ್ಲಿ ಕಷ್ಟವಾಗುತ್ತದೆ.
- ಕೋವಿಡ್ ರೋಗವು SARS-CoV-2 ವೈರಸ್‌ನಿಂದ ಬರುತ್ತದೆ. ಈ ಕಾಯಿಲೆಯಿಂದ ಬಳಲುತ್ತಿರುವ ವ್ಯಕ್ತಿಯು ಸೀನಿದಾಗ ಅಥವಾ ಕೆಮ್ಮಿದಾಗ ಅಸಂಖ್ಯಾತ ಹನಿಗಳು ಗಾಳಿಯಲ್ಲಿ ಹರಡುತ್ತವೆ. ಅಥವಾ ನೆಲದ ಮೇಲೆ ಮತ್ತು ಹತ್ತಿರದ ವಸ್ತುಗಳ ಮೇಲ್ಮೈ ಮೇಲೆ ಬೀಳುತ್ತವೆ.
- ರೋಗವು ವ್ಯಕ್ತಿಯಿಂದ ವ್ಯಕ್ತಿಗೆ ಹರಡುವ ವೈರಾಣುವಾಗಿದ್ದು, ಹತ್ತಿರದಲ್ಲಿರುವ ಇನ್ನೊಬ್ಬ ವ್ಯಕ್ತಿಯು ಈ ಹನಿಗಳನ್ನು ಶ್ವಾಸದ ಮೂಲಕ ಒಳಗೆಳೆದುಕೊಂಡಾಗ ಅಥವಾ ಆ ಹನಿಗಳ ಕಣಗಳಿರುವ ವಸ್ತುಗಳ ಮೇಲ್ಮೈಗಳನ್ನು ಸ್ಪರ್ಶಿಸಿ ನಂತರ ಮುಖ, ಕಣ್ಣುಗಳು ಅಥವಾ ಬಾಯಿಯನ್ನು ಮುಟ್ಟಿಕೊಂಡಲ್ಲಿ ಆ ವ್ಯಕ್ತಿಗೆ ಸೋಂಕು ತಗಲುತ್ತದೆ.
- ಸೋಂಕು ಇರುವ ವ್ಯಕ್ತಿಯಿಂದ ಒಂದು ಮೀಟರ್ ಒಳಗಿನ ಅಂತರದಲ್ಲಿರುವ ವ್ಯಕ್ತಿಗೆ ಈ ಸೋಂಕು ತಗಲುವ ಸಾಧ್ಯತೆ ಹೆಚ್ಚಾಗಿರುತ್ತದೆ.

2. ಉದ್ದೇಶ

- ಕರ್ತವ್ಯನಿರತ ಪೊಲೀಸರಲ್ಲಿ ಅವರ ಆರೋಗ್ಯದ ಸುರಕ್ಷತೆಯ ಬಗ್ಗೆ ಜಾಗೃತಿ ಮೂಡಿಸುವುದಾಗಿದೆ.
- ಪೊಲೀಸ್ ಠಾಣೆಗಳು, ಪೊಲೀಸರ ಕರ್ತವ್ಯದ ಸ್ಥಳಗಳು, ವಸತಿಗೃಹಗಳು ಇತ್ಯಾದಿ ಸ್ಥಳಗಳನ್ನು ಭೌತಿಕವಾಗಿ ಶುಚಿಗೊಳಿಸುವುದು ಹಾಗೂ ಕೋವಿಡ್ ಮುಕ್ತ ವಾತಾವರಣ ಕಲ್ಪಿಸುವುದು.
- ಕೋವಿಡ್ ವೈರಾಣುವಿನಿಂದ ಸಂರಕ್ಷಿಸಿಕೊಳ್ಳಲು ಲಭ್ಯವಿರುವ ವೈಸರ್, ಮಾಸ್ಕ್, ಗ್ಲೌಸ್, ಸ್ಯಾನಿಟೈಸರ್ ಮತ್ತು ಪಿ.ಪಿ.ಇ. ಕಿಟ್‌ಗಳನ್ನು ಯಾವ ಸಂದರ್ಭದಲ್ಲಿ, ಯಾವ ರೀತಿ ಉಪಯೋಗಿಸಬೇಕು ಎಂಬುದನ್ನು ತಿಳಿದುಕೊಳ್ಳಲು.
- ಕರ್ತವ್ಯನಿರತ ಪೊಲೀಸರಲ್ಲಿ ಯಾವ ಕಾರ್ಯವನ್ನು ಮಾಡಬೇಕು ಹಾಗೂ ಯಾವ ಕಾರ್ಯವನ್ನು ಮಾಡಬಾರದು (DO's and DON'Ts) ಎಂಬುದನ್ನು ತಿಳಿದುಕೊಳ್ಳಲು.

3. ಸಂಚಾರ ಪೊಲೀಸ್ ಠಾಣೆಗಳು

- ಠಾಣೆಗಳಿಗೆ ಬರುವ ಸಾರ್ವಜನಿಕರಿಗೆ ತಿಳಿಯುವಂತೆ ಕೋವಿಡ್ ಸಂಬಂಧ ಸೂಚನಾಫಲಕವನ್ನು ಅಳವಡಿಸುವುದು ಹಾಗೂ ಎಲ್ಲೆಂದರಲ್ಲಿ ಉಗುಳದಂತೆ ನಿರ್ಬಂಧಿಸುವುದು.
- ಸ್ವಾಗತಕಾರರು, ಸಾರ್ವಜನಿಕರ ಜೊತೆ ಸಂವಹನ ನಡೆಸುವಾಗ, ಹೊರ ಆವರಣದಲ್ಲಿ 2 ಮೀಟರ್‌ಗಳನ್ನು ಬಿಟ್ಟು ಸಾಮಾಜಿಕ ಅಂತರ ಕಾಯ್ದುಕೊಳ್ಳುವ ವ್ಯವಸ್ಥೆ ಮಾಡಬೇಕು.
- ಠಾಣೆಗಳಲ್ಲಿ ಪಿ.ಎಚ್.ಸಿ. ರವರು ನುರಿತ ವೈದ್ಯರನ್ನು ಠಾಣೆಗೆ ಕರೆದು ಸಿಬ್ಬಂದಿಗಳಿಗೆ ಕೋವಿಡ್ ರೋಗ ಹರಡುವಿಕೆಯ ಬಗ್ಗೆ ಇರುವ ಎಲ್ಲಾ ಅನುಮಾನಗಳನ್ನು ಪರಿಹರಿಸಿ ಮಾಸ್ಕ್, ಸ್ಯಾನಿಟೈಸರ್ ಉಪಯೋಗಿಸುವ ಬಗ್ಗೆ ಜಾಗೃತಿ ನೀಡಬೇಕು.

- ಠಾಣಾ ಆವರಣದಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದು ಮತ್ತು ಪ್ರತಿದಿನ ಸೋಂಕು ನಿವಾರಕ ಔಷಧಿಯನ್ನು ಸಿಂಪಡಿಸಬೇಕು.
- ಠಾಣೆಯ ಪ್ರವೇಶದ್ವಾರದಲ್ಲಿ ಆಗಮಿಸುವ ಮತ್ತು ನಿರ್ಗಮಿಸುವ ಎಲ್ಲಾ ಸಿಬ್ಬಂದಿಗಳು/ಸಾರ್ವಜನಿಕರಿಗೆ ಕಡ್ಡಾಯವಾಗಿ ಥರ್ಮಲ್ ಗನ್‌ನಿಂದ ದೇಹದ ತಾಪಮಾನ ಸ್ಕ್ರೀನಿಂಗ್(ಉಷ್ಣತೆ) ತಪಾಸಣೆ ಮಾಡಬೇಕು
- ಕೈಗಳನ್ನು ಸೋಪಿನಿಂದ ತೊಳೆಯುವುದು ಮತ್ತು ಸ್ಯಾನಿಟೈಸರ್ ಉಪಯೋಗಿಸಿ ಸ್ವಚ್ಛಗೊಳಿಸಬೇಕು.
- ಸಂದರ್ಶಕರು/ ದೂರುದಾರರ ದೂರು ಸ್ವೀಕೃತಿಗೆ ಪ್ರತ್ಯೇಕವಾಗಿ ಗಾಜಿನ ಕಿಟಕಿ ವ್ಯವಸ್ಥೆ ಮಾಡಬೇಕು- ದೂರವಾಣಿ ಮತ್ತು ಆನ್‌ಲೈನ್ ದೂರು ಅರ್ಜಿಗಳನ್ನು ಸ್ವೀಕರಿಸುವ ವ್ಯವಸ್ಥೆ ಮಾಡುವುದು.
- ಅರ್ಜಿ ವಿಚಾರಣೆಗೆ ಪ್ರತ್ಯೇಕವಾಗಿ ಠಾಣೆಯ ಹೊರಾಂಗಣದಲ್ಲಿ ಸೂಕ್ತ ಶಾಮಿಯಾನ ಹಾಕಿ ವ್ಯವಸ್ಥೆ ಮಾಡುವುದು.
- ಠಾಣೆಯಲ್ಲಿ ಪ್ರತ್ಯೇಕವಾಗಿ ವಿಶ್ರಾಂತಿ ಕೊಠಡಿ ವ್ಯವಸ್ಥೆ ಮಾಡುವುದು.
- ಠಾಣೆಯ ಸಿಬ್ಬಂದಿಗಳಿಗೆ ಕೋವಿಡ್ ಸೋಂಕು ತಗುಲಿದ್ದಲ್ಲಿ

  i. ಕೂಡಲೇ ಅವರನ್ನು ಪ್ರತ್ಯೇಕಗೊಳಿಸಿ ಸೂಕ್ತ ಚಿಕಿತ್ಸೆಯ ವ್ಯವಸ್ಥೆ ಮಾಡುವುದು.

  ii. ಬಿ.ಬಿ.ಎಂ.ಪಿ. ಅಧಿಕಾರಿಗಳಿಗೆ ಮಾಹಿತಿ ನೀಡಿ ಅವರ ಸೂಚನೆಯಂತೆ ಠಾಣೆ ಸೀಲ್‌ಡೌನ್ ಮಾಡುವುದು ಮುಂತಾದ ಕ್ರಮ ಕೈಗೊಳ್ಳುವುದು.

  iii. ಸೋಂಕಿತರ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಿತರ ಪತ್ತೆಗೆ ಸಹಕರಿಸುವುದು.

  iv. ಸೋಂಕಿತರ ಕುಟುಂಬದ ಸದಸ್ಯರ ಆರೋಗ್ಯದ ಬಗ್ಗೆಯೂ ಗಮನಹರಿಸುವುದು.

- ಠಾಣೆಗೆ ಆಗಮಿಸುವ ಸಂದರ್ಶಕರೊಂದಿಗೆ ವ್ಯವಹರಿಸುವ ಸಮಯದಲ್ಲಿ ಸಿಬ್ಬಂದಿಗಳು ಕಡ್ಡಾಯವಾಗಿ ಮಾಸ್ಕ್ ಅನ್ನು ಧರಿಸುವುದು
- ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿ, ಸಿಬ್ಬಂದಿಗಳ ನಡುವೆ ಕನಿಷ್ಠ 6 ಅಡಿಗಳ ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ಕರ್ತವ್ಯವನ್ನು ನಿರ್ವಹಿಸುವುದು. ಮುಖಗವಸು ಧರಿಸುವುದು.
- ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿ/ಸಿಬ್ಬಂದಿಗಳು ರಜೆಯ ಮೇಲೆ ಕೇಂದ್ರಸ್ಥಾನ ಬಿಟ್ಟು ತೆರಳುವಾಗ ಯಾವ ಊರಿಗೆ ತೆರಳುತ್ತಾರೆ ಎಂಬ ಬಗ್ಗೆ ಮಾಹಿತಿಯನ್ನು ಪ್ರತ್ಯೇಕ ರಿಜಿಸ್ಟರ್‌ನಲ್ಲಿ ಕಡ್ಡಾಯವಾಗಿ ನಮೂದಿಸುವ ವ್ಯವಸ್ಥೆ ಮಾಡಬೇಕು.
- ಠಾಣೆಯ ಸಿಬ್ಬಂದಿಗಳಿಗೆ ವಾಟ್ಸ್ ಆಪ್ ಗ್ರೂಪ್‌ನಲ್ಲಿ ಸಾಮಾನ್ಯ ಸೂಚನೆಗಳನ್ನು ನೀಡುವುದು ಹಾಗೂ ವಿಡಿಯೋ ಕಾನ್ಫರೆನ್ಸ್ ಉಪಯೋಗಿಸುವುದು.
- ಸಿಬ್ಬಂದಿಗಳಿಗೆ ಅವಶ್ಯಕ ಸೌಲಭ್ಯಗಳನ್ನು ಒದಗಿಸಲು ಠಾಣಾ ಮಟ್ಟದಲ್ಲಿ ವೆಲ್‌ಫೇರ್ ಘಟಕವನ್ನು ತೆರೆದು ಓರ್ವ ಅಧಿಕಾರಿಯನ್ನು ನೇಮಕ ಮಾಡಬೇಕು.
- ಘಟಕದ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿಗಳು ಕಡ್ಡಾಯವಾಗಿ "ಆರೋಗ್ಯ ಸೇತು" ಆಪ್ ಡೌನ್‌ಲೋಡ್ ಮಾಡಿಕೊಂಡು ಬಳಸಬೇಕು.

4. **ದೈನಂದಿನ ಪೊಲೀಸ್ ಕರ್ತವ್ಯಗಳಲ್ಲಿ ಅನುಸರಿಸಬೇಕಾದ ಸಾಮಾನ್ಯ ಸೂಚನೆಗಳು**

- ಪೊಲೀಸರು ಬ್ರೀಫಿಂಗ್ ಸಭೆ, ಪರೇಡ್, ಬಂದೋಬಸ್ತ್ ಕರ್ತವ್ಯ ಇತ್ಯಾದಿ ಕಡೆ ಒಟ್ಟಾಗಿ ಗುಂಪು ಸೇರದಂತೆ ನೋಡಿಕೊಳ್ಳುವುದು.
- ಕರ್ತವ್ಯಗಳನ್ನು ಹಂಚಿಕೆ ಮಾಡಲು ವಿಶಾಲವಾದ ಜಾಗವನ್ನು ಬಳಸಬೇಕು. ಇಲ್ಲವೇ ವಾಟ್ಸ್ ಆಪ್ ಮೂಲಕ ಸಿಬ್ಬಂದಿಯು ಕರ್ತವ್ಯ ನಿರ್ವಹಿಸಬೇಕಾದ ಜಾಗವನ್ನು ಮುಂಚಿತವಾಗಿ ತಿಳಿಸುವುದು.
- ಕರ್ತವ್ಯಗಳನ್ನು ಹಂಚಿಕೆ ಮಾಡುವಾಗ ಹಾಗೂ ಸೂಚನೆಗಳನ್ನು ನೀಡುವಾಗ ಕನಿಷ್ಠ ಎರಡು ಮೀಟರ್ ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳುವಂತೆ ನೋಡಿಕೊಳ್ಳುವುದು.

- ಪೊಲೀಸರು ಠಾಣೆಗಳಲ್ಲಿ, ಪೊಲೀಸ್ ವಾಹನಗಳಲ್ಲಿ ಹಾಗೂ ಇತರೆ ಕರ್ತವ್ಯ ನಿರತ ಸ್ಥಳಗಳಲ್ಲಿ ಗುಂಪಾಗಿ ಕುಳಿತುಕೊಳ್ಳುವುದು, ವಿಶ್ರಾಂತಿ ಪಡೆಯುವುದನ್ನು ನಿಲ್ಲಿಸುವುದು.
- ಕರ್ತವ್ಯ ನಿರತ ಪೊಲೀಸರಿಗೆ ಅವರ ಸುರಕ್ಷತೆಗಾಗಿ ಅವಶ್ಯವಿರುವ ಸುರಕ್ಷತಾ ಸಾಧನಗಳಾದ ಮಾಸ್ಕ್, ಗ್ಲೌಸ್, ಸ್ಯಾನಿಟೈಸರ್ ಮತ್ತು ಪಿ.ಪಿ.ಇ. ಕಿಟ್‌ಗಳನ್ನು ನೀಡುವುದು ಹಾಗೂ ಅವುಗಳನ್ನು ಬಳಸುವ ಸರಿಯಾದ ವಿಧಾನಗಳನ್ನು ತಿಳಿಸಿಕೊಡುವುದು.
- ಪೊಲೀಸರು ಆದಷ್ಟು ತಮ್ಮ ಮನೆಗಳಿಂದಲೇ ಆಹಾರ ಮತ್ತು ನೀರನ್ನು ತರುವುದು. ಹೊರಗಿನ ಆಹಾರ ಸೇವಿಸುವುದನ್ನು ತಪ್ಪಿಸುವುದು.
- ಪೊಲೀಸರು ಹಾಸಿಗೆಗಳು/ ನೀರಿನ ಬಾಟಲಿಗಳು/ ಕನ್ನಡಕ/ಸಮವಸ್ತ್ರಗಳು/ಇತರೆ ಉಪಕರಣಗಳು/ ಪಿ.ಪಿ.ಇ. ಗಳನ್ನು ಪರಸ್ಪರ ಹಂಚಿಕೊಳ್ಳಬಾರದು.
- ಎಲ್ಲಾ ಪೊಲೀಸರು ಕಡ್ಡಾಯವಾಗಿ ಆರೋಗ್ಯ ಸೇತು ಮೊಬೈಲ್ ಆಪ್ ಅನ್ನು ಡೌನ್ ಲೋಡ್ ಮಾಡಿಕೊಂಡು ತಮ್ಮ ಆರೋಗ್ಯದ ಬಗ್ಗೆ ನಿಗಾವಹಿಸುವುದು.
- ಕಂಟೈನ್‌ಮೆಂಟ್ ಜೋನ್, ಆಸ್ಪತ್ರೆಗಳು, ಕ್ವಾರಂಟೈನ್ ಸೆಂಟರ್‌ಗಳು, ಚೆಕ್ ಪೋಸ್ಟ್‌ಗಳು ಇತ್ಯಾದಿ ಸಿಬ್ಬಂದಿಗಳನ್ನು ರೊಟೇಷನ್ ಮೇಲೆ ಕರ್ತವ್ಯಕ್ಕೆ ನೇಮಿಸುವುದು.
- ಸಿಬ್ಬಂದಿವರ್ಗದವರುಗಳಿಗೆ ವಿಶ್ರಾಂತಿ ಅವಶ್ಯಕತೆ ಇರುವುದರಿಂದ ರಜೆ ಮಂಜೂರು ಮಾಡುವುದು.
- ಪೊಲೀಸರ ಹಾಗೂ ಅವರ ಕುಟುಂಬದವರ ಆರೋಗ್ಯ ಯೋಗಕ್ಷೇಮಕ್ಕಾಗಿ ಸಮಾಲೋಚಕರನ್ನು ನೇಮಿಸಿ ಅವರ ಸಮಸ್ಯೆಗಳನ್ನು ಆಲಿಸುವುದು ಹಾಗೂ ಅದಕ್ಕೆ ಪರಿಹಾರವನ್ನು ಸೂಚಿಸುವುದು.
- ಕಂಟೈನ್‌ಮೆಂಟ್ ಜೋನ್, ಆಸ್ಪತ್ರೆಗಳು, ಕ್ವಾರಂಟೈನ್ ಸೆಂಟರ್‌ಗಳು, ಚೆಕ್ ಪೋಸ್ಟ್‌ಗಳು ಹಾಗೂ ಇತರ ಕೋವಿಡ್ ಪ್ರದೇಶಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ಸಿಬ್ಬಂದಿವರ್ಗದವರುಗಳಿಗೆ ನಿಯಮಿತವಾಗಿ ಕೋವಿಡ್ ಪರೀಕ್ಷೆ ಮಾಡಿಸುವುದು.

4.1 **ವಿ.ಐ.ಪಿ./ವಿ.ವಿ.ಐ.ಪಿ ಬಂದೋಬಸ್ತ್ ಸಂದರ್ಭಗಳಲ್ಲಿ :-**

- ಗಣ್ಯ ವ್ಯಕ್ತಿಗಳ ಭೇಟಿ ಸಂದರ್ಭದಲ್ಲಿ ಅವರ ಸುತ್ತ ಮುತ್ತ ಸಾರ್ವಜನಿಕರು ಇರದಂತೆ ಹಾಗೂ ಇತರೇ ಗಣ್ಯ ವ್ಯಕ್ತಿಗಳು ಸೇರದಂತೆ ಎಲ್ಲರು ಸಾಮಾಜಿಕ ಅಂತರ ಕಾಯ್ದುಕೊಳ್ಳುವಂತೆ ನೋಡಿಕೊಳ್ಳುವುದು.
- ಕೋವಿಡ್ ರೋಗಲಕ್ಷಣವುಳ್ಳ ಸೋಂಕಿತರು ವಿ.ಐ.ಪಿ/ವಿ.ವಿ.ಐ.ಪಿ ಕಾರ್ಯಕ್ರಮಗಳಲ್ಲಿ ಜನಪ್ರಿಯ ವ್ಯಕ್ತಿಗಳನ್ನು ನೋಡಲು ಆಕಸ್ಮಿಕವಾಗಿ ಬರುವ ವ್ಯಕ್ತಿಗಳನ್ನು ಮುಂಚಿತವಾಗಿ ಪತ್ತೆ ಹಚ್ಚಿ ಸುರಕ್ಷಾ ಕ್ರಮಗಳನ್ನು ಅನುಸರಿಸುವುದು.
- ವಿ.ಐ.ಪಿ/ವಿ.ವಿ.ಐ.ಪಿ ಗಳ ಸಭೆ, ಕಾರ್ಯಕ್ರಮ, ಪ್ರವಾಸದ ಸಂದರ್ಭದಲ್ಲಿ ತಂಗುವ ಸ್ಥಳ ಹಾಗೂ ಸಮಯದ ಪಟ್ಟಿಯನ್ನು ಮುಂಗಡವಾಗಿ ಸಂಗ್ರಹಿಸಿ, ಯಾವುದೇ ಸೋಂಕು ಹರಡದಂತೆ ಮುನ್ನೆಚ್ಚರಿಕೆ ವಹಿಸುವುದು.
- ಕಾರ್ಯಕ್ರಮ ನಡೆಯುವ ಸ್ಥಳಗಳಲ್ಲಿ ಆಯೋಜಕರು ಪ್ರವೇಶ ದ್ವಾರದಲ್ಲಿ ಒಳಬರುವ ಎಲ್ಲರಿಗೆ ಥರ್ಮಲ್ ಸ್ಕ್ರೀನಿಂಗ್ ಮಾಡಿಸಲು ಕ್ರಮ ಕೈಗೊಳ್ಳುವುದು.

- ಬಂದೋಬಸ್ತ್ ಕರ್ತವ್ಯ ನಿರ್ವಹಿಸುವ ಅಧಿಕಾರಿ/ಸಿಬ್ಬಂದಿಗಳು ಡೋರ್ ಫ್ರೇಮ್ ಮೆಟಲ್ ಡಿಟೆಕ್ಟರ್ ಮುಖಾಂತರ ಸಾರ್ವಜನಿಕರನ್ನು ತಪಾಸಣೆಗೆ ಒಳಪಡಿಸುವ ಸಮಯದಲ್ಲಿ ಸ್ವತಃ ಪಿ.ಪಿ.ಇ ಕಿಟ್ ಧರಿಸುವುದು. ಸಾರ್ವಜನಿಕರು ಯಾವುದೇ ವಸ್ತುಗಳನ್ನು ಕೈ ಅಥವಾ ಕಾಲುಗಳಿಂದ ಸ್ಪರ್ಶ ಮಾಡದಂತೆ ತಿಳುವಳಿಕೆ ನೀಡತಕ್ಕದ್ದು, ಹಾಗೂ ಕಡ್ಡಾಯವಾಗಿ ಸುರಕ್ಷಾ ಕ್ರಮಗಳನ್ನು (ಉ.ದಾ: ಮಾಸ್ಕ್, ಗ್ಲೌಸ್, ಇತ್ಯಾದಿ) ಒಳಗೊಂಡಿರುವ ವ್ಯಕ್ತಿಗಳನ್ನು ಮಾತ್ರ ಸಮಾರಂಭದೊಳಗೆ ಬಿಡತಕ್ಕದ್ದು.

- ಪಿ.ಪಿ.ಇ/ಪಿ.ಪಿ.ಇ.ಪಿ ಗಳ ಸಾಧನಗಳನ್ನು ಕಾರ್ಯಕ್ರಮ ಸ್ಥಳಕ್ಕೆ ತರುವ ಮುನ್ನ ಹಾಗೂ ಸಭೆ ಮುಗಿದ ನಂತರ ಸ್ಯಾನಿಟೈಸ್ ಮಾಡಲು ಕ್ರಮಕೈಗೊಳ್ಳುವುದು.
- ವಿಡಿಯೋ ಕ್ಯಾಮರಾ, ಸ್ಟಿಲ್ ಕ್ಯಾಮರಾ, ಫೋನ್‌ಗಳ ಮುಖಾಂತರ ಪ್ರತಿಭಟನಾಕಾರರ ಮೇಲೆ ನಿಗಾವಹಿಸುವುದು.

4.2 ಅರ್ಜಿ ವಿಚಾರಣೆಗಳಲ್ಲಿ ಅನುಸರಿಸಬೇಕಾದ ಮುನ್ನೆಚ್ಚರಿಕಾ ಕ್ರಮಗಳು:-

- ಅರ್ಜಿ ವಿಚಾರಣೆ ಮಾಡುವಾಗ ಸಾಮಾಜಿಕ ಅಂತರವನ್ನು ಕಾಪಾಡುವ ನಿಟ್ಟಿನಲ್ಲಿ ಸಾರ್ವಜನಿಕರನ್ನು ಭೇಟಿ ಮಾಡುವ ಸಂದರ್ಭದಲ್ಲಿ ಸೂಕ್ತ ಸ್ಥಳಾವಕಾಶವನ್ನು ಗುರುತಿಸಿಕೊಂಡು ಆ ಸ್ಥಳದಲ್ಲಿ ವಿಚಾರಣೆ ಮಾಡುವುದು.
- ಅರ್ಜಿ ವಿಚಾರಣೆ ಮಾಡುವ ಅಧಿಕಾರಿ/ಸಿಬ್ಬಂದಿಯವರು ಸೂಕ್ತ ಮಾಸ್ಕ್ ಹಾಗೂ ಗ್ಲೌಸ್‌ಗಳನ್ನು ಧರಿಸಿಕೊಂಡು ಮುನ್ನೆಚ್ಚರಿಕೆ ವಹಿಸುವುದು.
- ಯಾವುದೇ ದಾಖಲಾತಿಗಳನ್ನು ಪರಿಶೀಲನೆ ಮಾಡುವ ಮತ್ತು ಪಡೆಯುವ ಸಂದರ್ಭದಲ್ಲಿ ಬರಿ ಕೈ ನಿಂದ ಮುಟ್ಟದೆ ಅವುಗಳನ್ನು ಸೂಕ್ತ ಬಗೆ ಕೈ ಗ್ಲೌಸ್ ಗಳನ್ನು ಧರಿಸಿ ಪಡೆಯುವುದು.
- ಅರ್ಜಿ ವಿಚಾರಣೆ ಸಂದರ್ಭದಲ್ಲಿ ಹಾಜರಿರುವಂತಹ ಅರ್ಜಿದಾರರು, ಎದುರು ಅರ್ಜಿದಾರರು, ಸಾಕ್ಷಿದಾರರು, ಇತರರು ಇದ್ದರೆ ಅವರೆಲ್ಲರು ಸಾಮಾಜಿಕ ಅಂತರ ಕಾಪಾಡಿಕೊಳ್ಳುವಂತೆ ನೋಡಿಕೊಳ್ಳುವುದು.
- ಅರ್ಜಿ ವಿಚಾರಣೆಗೆ ಸಂಬಂಧಿಸಿದಂತೆ ಆದಷ್ಟು ದೂರವಾಣಿ ಮುಖಾಂತರ, ವಾಟ್ಸ್ಆಪ್ ಮುಖಾಂತರ ಅರ್ಜಿ ಬಗೆಹರಿಸಲು ಕ್ರಮ ಕೈಗೊಂಡು ಸಾರ್ವಜನಿಕರು ಆದಷ್ಟು ಠಾಣೆಗೆ ಬರುವುದನ್ನು ನಿಯಂತ್ರಿಸುವುದು.
- ಅರ್ಜಿ ವಿಚಾರಣೆ ಮಾಡುವ ಸಮಯದಲ್ಲಿ ಸಾರ್ವಜನಿಕರಿಂದ ಸಹಿ ಪಡೆಯುವ ಸಂದರ್ಭದಲ್ಲಿ ಅವರು ಕಡ್ಡಾಯವಾಗಿ ಗ್ಲೌಸ್‌ಗಳನ್ನು ಧರಿಸತಕ್ಕದ್ದು.
- ಪ್ರಾಥಮಿಕವಾಗಿ ವಿಚಾರಣೆಯ ನಂತರದ ವಿಚಾರಣೆಗಳನ್ನು ಸಾಧ್ಯವಾದಷ್ಟು ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆಸುವುದು. ಅಂತರ್ಜಾಲದ ಸೂಕ್ತ ಬಳಕೆಯನ್ನು ಮಾಡಿಕೊಳ್ಳುವುದು.
- ಅರ್ಜಿ ವಿಚಾರಣೆಯ ಪೂರ್ಣ ಪ್ರಕ್ರಿಯೆ ಮುಗಿದ ನಂತರ ಉಪಯೋಗಿಸಿದ ವಸ್ತುಗಳನ್ನು ಹಾಗೂ ಗ್ಲೌಸ್‌ಗಳನ್ನು ಸೂಕ್ತ ರೀತಿಯಲ್ಲಿ ನಾಶಪಡಿಸುವುದು. ಅರ್ಜಿ ವಿಚಾರಣೆ ಸಂದರ್ಭದಲ್ಲಿ ಸಿಬ್ಬಂದಿಯವರು ಯಾವುದೇ ಕಾರಣಕ್ಕೂ ಸಾರ್ವಜನಿಕರನ್ನು ಮುಟ್ಟ ಕೂಡದು.

4.3 ಕಂಟೈನ್ಮೆಂಟ್ ಝೋನ್ ಮತ್ತು ಕರ್ಫ್ಯೂ ನಿರ್ವಹಿಸುತ್ತಿರುವ ಸಿಬ್ಬಂದಿ ಹಾಗೂ ಅಧಿಕಾರಿಗಳು ಅನುಸರಿಸಬೇಕಾದ ಕ್ರಮಗಳು:

- ಸಿಬ್ಬಂದಿಗಳಿಗೆ ನೀಡಿದ ಪಿ.ಪಿ.ಇ(Personal Protection Equipment), ವೈಸರ್ಸ್, ಎನ್-95, ಮಾಸ್ಕ್‌ಗಳನ್ನು ಕಡ್ಡಾಯವಾಗಿ ಧರಿಸುವುದು.
- ಯಾವುದೇ ವ್ಯಕ್ತಿಗಳ ಸಂಪರ್ಕಕ್ಕೆ ಆಸ್ಪದ ನೀಡಕೂಡದು.
- ಸಿಬ್ಬಂದಿಗಳು ಪೂರ್ಣ ಪ್ರಮಾಣ ತೋಳಿನ ಸಮವಸ್ತ್ರ ಶರ್ಟನ್ನು ಧರಿಸುವುದು.
- ಇಲಾಖೆಯಿಂದ ನೀಡಿದ ಸ್ಯಾನಿಟೈಸರ್‌ನಿಂದ ಕೈಗಳನ್ನು ತೊಳೆದುಕೊಳ್ಳುವುದು.
- ದಿನನಿತ್ಯ ಕರ್ತವ್ಯ ನಿರ್ವಹಿಸಿ ಮನೆಗೆ ತೆರಳುವಾಗ ಮನೆಯಲ್ಲಿ ಬಿಸಿ ನೀರು ಕಾಯಿಸುವಂತೆ ತಿಳಿಸಿ ಬಟ್ಟೆಗಳನ್ನು ಬಿಸಿ ನೀರು ಮತ್ತು ಸೋಪು ಮಿಶ್ರಿತ ನೀರಿನಲ್ಲಿ ಹಾಕಿ ಸೋಪಿನಿಂದ ಸ್ವಚ್ಛ ಮಾಡುವುದು.
- ಪ್ರತಿ ಸಿಬ್ಬಂದಿಯವರು ಕಾಲಕಾಲಕ್ಕೆ Sanitiser ಬಳಸಿ ಕೈಗಳನ್ನು ಶುಚಿಯಾಗಿ ಇಟ್ಟುಕೊಳ್ಳುವುದು.

4.4 ನ್ಯಾಯಾಲಯ ಕರ್ತವ್ಯಗಳು ಮತ್ತು ಪ್ರೋಸೆಸ್ :-

- ನ್ಯಾಯಾಲಯಗಳ ಕೆಲಸ ಕರ್ತವ್ಯಗಳಲ್ಲಿ ಕೆಲಸ ನಿರ್ವಹಿಸುವ ಅಧಿಕಾರಿ/ಸಿಬ್ಬಂದಿಗಳು ಸಂಪರ್ಕಿಸುವ ಎಲ್ಲ ಸಾಕ್ಷಿದಾರರೊಂದಿಗೆ ಸಾಮಾಜಿಕ ಅಂತರವನ್ನು ಕಾಪಾಡಿಕೊಂಡು ಶುಚಿತ್ವ ಹಾಗೂ ಸುರಕ್ಷತೆ ವಹಿಸುವ ಬಗ್ಗೆ ಸ್ಯಾನಿಟೈಸ್ ಮಾಡುವುದು ಹಾಗೂ ಮುಖಕ್ಕೆ ಮಾಸ್ಕ್ ಹಾಗೂ ಫೇಸ್ ಶೀಲ್ಡ್, ಕೈಗಳಿಗೆ ಹ್ಯಾಂಡ್‌ಗ್ಲೌಸ್. ಕಡ್ಡಾಯವಾಗಿ ಧರಿಸುವುದು.

- ನ್ಯಾಯಾಲಯಕ್ಕೆ ಆರೋಪಿಗಳನ್ನು ನೇರವಾಗಿ ಹಾಜರುಪಡಿಸುವ ಬದಲು ವಿಡಿಯೋ ಕಾನ್ಫರೆನ್ಸ್ ಮೂಲಕ ವಿಚಾರಣೆ ನಡೆಸಲು ಅನುಕೂಲವಾಗುವಂತೆ ಗೌರವಾನ್ವಿತ ನ್ಯಾಯಾಲಯಕ್ಕೆ ಮನವಿ ಸಲ್ಲಿಸುವುದು.

- ಆರೋಪಿಗಳ ಬೆಂಗಾವಲು ಕರ್ತವ್ಯದಲ್ಲಿ ನೇಮಕವಾದ ಸಿಬ್ಬಂದಿಯವರು ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವಾಗ ಕಡ್ಡಾಯವಾಗಿ ಮಾಸ್ಕ್ ಹಾಗೂ ಫೇಸ್‌ಶೀಲ್ಡ್ ಧರಿಸುವುದು ಮತ್ತು ಅವಶ್ಯಕತೆ ಕಂಡುಬಂದರೆ ಗ್ಲೌಸ್ ಧರಿಸುವುದು ಅಥವಾ ಸ್ಯಾನಿಟೈಸರ್‌ನಿಂದ ಆಗಾಗ್ಗೆ ಕೈಗಳನ್ನು ಶುಚಿಗೊಳಿಸುವುದು.

- ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವಾಗ ಕೋವಿಡ್ ಶಂಕಿತ ವ್ಯಕ್ತಿ ಎಂದು ಕಂಡುಬಂದರೆ ಅಂತಹವರನ್ನು ಪಿ.ಪಿ.ಇ. ಧರಿಸಿ ನೋಡಿಕೊಳ್ಳುವುದು ಹಾಗೂ ಆತನಿಗೆ ಕೋವಿಡ್ ಪರೀಕ್ಷೆಗೆ ಒಳಪಡಿಸಲು ಹಾಗೂ ಮುಂದಿನ ಪ್ರಕ್ರಿಯೆಗೆ ಹತ್ತಿರದ ವೈದ್ಯಾಧಿಕಾರಿಗಳ ಸಹಾಯ ಪಡೆಯುವುದು.

- ನ್ಯಾಯಾಲಯಕ್ಕೆ ಸಾಕ್ಷಿದಾರರನ್ನು ಕರೆದುಕೊಂಡು ಹೋಗುವಾಗ ಪ್ರವೇಶ ದ್ವಾರದಲ್ಲಿ ಕಡ್ಡಾಯವಾಗಿ ಥರ್ಮಲ್ ಸ್ಕ್ರೀನಿಂಗ್ ಮಾಡಿಸುವುದು.

- ನ್ಯಾಯಾಲಯದಲ್ಲಿ ನಡೆಯುವ ಕಲಾಪಗಳ ಪಟ್ಟಿಯನ್ನು ಪರಿಶೀಲಿಸಿ ಆಯಾ ದಿನ ವಿಚಾರಣೆ ಕೈಗೊಳ್ಳುವ ಪ್ರಕರಣಗಳಲ್ಲಿ ಮಾತ್ರ ಸಾಕ್ಷಿದಾರರನ್ನು ನ್ಯಾಯಾಲಯಕ್ಕೆ ಕರೆಸುವುದು.

- ಮಾನ್ಯ ಎ.ಪಿ.ಪಿ./ಪಿ.ಪಿ.ರವರ ಮುಂದೆ ಸಾಕ್ಷಿದಾರರನ್ನು ಅವರ ಕಛೇರಿಗೆ ಕರೆದುಕೊಂಡು ಹೋಗದೆ ಈ ಉದ್ದೇಶಕ್ಕಾಗಿ ನ್ಯಾಯಾಲಯದ ಆವರಣದಲ್ಲಿಯೇ ನಿರ್ಮಿಸಿರುವ ಸಂದರ್ಶಕರ/ಸಾಕ್ಷಿದಾರರ ಗ್ಯಾಲರಿಯಲ್ಲಿ ಭೇಟಿ ಮಾಡಿಸುವುದು. ಈ ಸಂದರ್ಭದಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳುವಂತೆ ನೋಡಿಕೊಳ್ಳುವುದು.

- ಠಾಣೆಯಿಂದ ನ್ಯಾಯಾಲಯಕ್ಕೆ ತೆಗೆದುಕೊಂಡು ಹೋಗುವ ದಾಖಲಾತಿಗಳು, ಮುದ್ದೆಮಾಲುಗಳನ್ನು ಸ್ಯಾನಿಟೈಸ್ ಮಾಡಿ ತೆಗೆದುಕೊಂಡು ಹೋಗುವುದು.

- ನ್ಯಾಯಾಲಯದಿಂದ ಬಂದಂತಹ ಸಮನ್ಸ್/ವಾರೆಂಟ್ ಹಾಗೂ ಇತರ ದಾಖಲಾತಿಗಳನ್ನು ಠಾಣೆಯಲ್ಲಿ ಇಡುವ ಮೊದಲು ಸ್ಯಾನಿಟೈಸ್ ಮಾಡುವುದು.

- ನ್ಯಾಯಾಲಯಕ್ಕೆ ಹಾಜರಾಗುವ ಸಾಕ್ಷಿದಾರರು ಕೋವಿಡ್ ಹಾಟ್‌ಸ್ಪಾಟ್‌ಗಳಿಂದ, ಕಂಟೈನ್ಮೆಂಟ್ ವಲಯಗಳಿಂದ ಬರುವವರಿದ್ದರೆ ಅಂತಹ ಸಾಕ್ಷಿದಾರರನ್ನು ನ್ಯಾಯಾಲಯಕ್ಕೆ ಹಾಜರಾಗದಂತೆ ದೂರವಾಣಿ ಮುಖಾಂತರ ತಿಳಿಸುವುದು.

4.5 ಸಮನ್ಸ್ ಕರ್ತವ್ಯದ ಸಿಬ್ಬಂದಿಯವರು ಅನುಸರಿಸಬೇಕಾದ ಕ್ರಮಗಳು:

- ನ್ಯಾಯಾಲಯದ ಸಿಬ್ಬಂದಿಯಿಂದ ಮುದ್ದಾಂ ಸಂಗ್ರಹಿಸುವ ನ್ಯಾಯಾಲಯದ ಆದೇಶಿಕೆಗಳನ್ನು ಸುರಕ್ಷಿತ ಹ್ಯಾಂಡ್‌ಗ್ಲೌಸ್ ಧರಿಸಿದ ಕೈಗಳಿಂದ ಸಂಗ್ರಹಿಸುವುದು.
- ಪೊಲೀಸ್ ಅಧಿಕಾರಿ/ಸಿಬ್ಬಂದಿಗಳಿಗೆ ನ್ಯಾಯಾಲಯ ಹೊರಡಿಸುವ ಆದೇಶಿಕೆಗಳನ್ನು ಠಾಣೆ/ಕಛೇರಿ ಗಳ ಈ-ಮೇಲ್ ಮೂಲಕ ಅಥವಾ ವಾಟ್ಸ್‌ಆಪ್ ಮೂಲಕ ಜಾರಿಗೊಳಿಸುವುದು.

- ನ್ಯಾಯಾಲಯದ ಸಮನ್ಸ್‌ಗಳನ್ನು ಜಾರಿ ಮಾಡುವ ಸಿಬ್ಬಂದಿಗಳು ಮಾಸ್ಕ್, ಗ್ಲೌಸ್ ಧರಿಸುವುದು ಹಾಗೂ ಸ್ಯಾನಿಟೈಸರ್ ಇಟ್ಟುಕೊಂಡು ಆಗಾಗ್ಗೆ ಕೈಗಳನ್ನು ಸ್ಯಾನಿಟೈಸ್ ಮಾಡಿಕೊಳ್ಳುವುದು.
- ಸಾಕ್ಷಿದಾರರಿಗೆ ಸಾಧ್ಯವಾದಷ್ಟು ದೂರವಾಣಿ ಮುಖಾಂತರ, ವಾಟ್ಸ್‌ಆಪ್, ಈ-ಮೇಲ್ ಮುಖಾಂತರ ಜಾರಿಗೊಳಿಸುವುದು.
- ಪ್ರಕರಣದ [illegible] ಅವಶ್ಯತೆ ಮೇರೆಗೆ ಹೊರ ಜಿಲ್ಲೆ/ದೂರದ ಸ್ಥಳಗಳ ಸಮನ್ಸ್ ಜಾರಿಗೊಳಿಸ[illegible] ಇಲ್ಲವಾದಲ್ಲಿ ನ್ಯಾಯಾಲಯದಲ್ಲಿ ಕೋವಿಡ್-19 ರೋಗದ ನಿಯಂತ್ರಣಕ್ಕೆ ಬರುವವರೆಗೆ ಮುಂದಿನ ದಿನಾಂಕವನ್ನು ಕಾಯ್ದಿರಿಸುವುದು.
- ಸಮನ್ಸ್ ಜಾರಿ ಮಾಡುವ ಸಿಬ್ಬಂದಿಯವರು [illegible] ಸಮನ್ಸ್ [illegible] ಸ್ಥಳಗಳಿಗೆ ಹೋಗಿ ಜಾರಿ ಮಾಡುವುದು. ಅನಾವಶ್ಯಕವಾಗಿ ಪ್ರಯಾಣ ಮಾಡುವುದನ್ನು ತಪ್ಪಿಸುವುದು.

4.6 **ವಾರೆಂಟ್ ಜಾರಿ ಸಿಬ್ಬಂದಿಯವರು ಅನುಸರಿಸಬೇಕಾದ ಕ್ರಮಗಳು:**

- ನ್ಯಾಯಾಲಯದ ಆದೇಶಗಳನ್ನು ಕಾರ್ಯಗತ ಮಾಡುವಂತಹ ಎಲ್ಲಾ ಅಧಿಕಾರಿ/ಸಿಬ್ಬಂದಿಗಳು ಸುರಕ್ಷಿತವಾದ ಮಾಸ್ಕ್, ಹ್ಯಾಂಡ್‌ಗ್ಲೌಸ್, ಫೇಸ್ ಶೀಲ್ಡ್ ಕಡ್ಡಾಯವಾಗಿ ಧರಿಸಲು ಕ್ರಮ ಕೈಗೊಳ್ಳುವುದು.
- ವಾರೆಂಟ್ ಆಸಾಮಿಗಳನ್ನು ದಸ್ತಗಿರಿ ಮಾಡಿ ಹಾಜರುಪಡಿಸುವಾಗ ಆದಷ್ಟು ಬಹಳ ದಿನಗಳಿಂದ ನ್ಯಾಯಾಲಯಕ್ಕೆ ಹಾಜರಾಗದೇ ಇರುವ, [illegible] ಆರೋಪಿಗಳನ್ನು ಹಾಜರುಪಡಿಸುವುದು. ಉದಾಹರಣೆಗಾಗಿ, ಕೇವಲ ಒಂದು ದಿನಾಂಕವನ್ನು ತಪ್ಪಿಸಿಕೊಂಡು ವಾರೆಂಟ್ ಆಗಿರುವಂತಹ ಆರೋಪಿತರನ್ನು ಕೂಡಲೇ ರೀಕಾಲ್ ಮಾಡಿಕೊಳ್ಳುವಂತೆ ತಿಳಿಸುವುದು.
- ವಾರೆಂಟ್ ಆಸಾಮಿಯನ್ನು ಬಂಧಿಸಿದ ಕೂಡಲೇ ಅವರಿಗೆ ಕೋವಿಡ್ ಲಕ್ಷಣಗಳಿರುವುದರ ಇದೆಯೇ ಎಂಬುದರ ಬಗ್ಗೆ ವಿಚಾರಣೆ ಮಾಡುವುದು ಹಾಗೂ ಕೋವಿಡ್ ಪರೀಕ್ಷೆ ಮಾಡಿಸಿ ನ್ಯಾಯಾಲಯಕ್ಕೆ ಹಾಜರುಪಡಿಸುವುದು.
- ವಾರೆಂಟ್ ಆಸಾಮಿಯು ತಪ್ಪಿಸಿಕೊಳ್ಳುವ ಸಾಧ್ಯತೆ ಕಂಡುಬಂದಲ್ಲಿ ಮಾತ್ರ ಹ್ಯಾಂಡ್‌ಕಫ್ ಜೊತೆಗೆ ಲೀಡಿಂಗ್ ಚೈನ್ ಬಳಸುವುದು ಹಾಗೂ ಬಳಸಿದ ನಂತರ ಅವುಗಳನ್ನು ಸ್ಯಾನಿಟೈಸ್ ಮಾಡುವುದು.
- ವಾರೆಂಟ್ ಸಿಬ್ಬಂದಿಯು ವಾರೆಂಟ್ ಆಸಾಮಿಯನ್ನು ಬಂಧಿಸಿದರೆ, ಆ ಆಸಾಮಿಯನ್ನು ಅಂತಿಮವಾಗಿ ಕಾರಾಗೃಹಕ್ಕೆ ಬಿಡುವವರೆಗೂ ಅದೇ ಸಿಬ್ಬಂದಿಯು ಜೊತೆಗಿದ್ದು ಬೆಂಗಾವಲು ಕರ್ತವ್ಯ ನಿರ್ವಹಿಸುವುದು. ಬೇರೆಯವರ ಸಂಪರ್ಕಕ್ಕೆ ಬಾರದಂತೆ ನೋಡಿಕೊಳ್ಳುವುದು.
- ಪೊಲೀಸ್ ಅಧಿಕಾರಿಗಳು ಹಾಗೂ ಇತರೆ ಸರ್ಕಾರಿ ನೌಕರರಿಗೆ ಹೊರಡಿಸುವ ಸಾಕ್ಷಿದಾರರ ವಾರೆಂಟ್‌ಗಳನ್ನು ನ್ಯಾಯಾಲಯಕ್ಕೆ ಹಾಜರಾಗುವಂತೆ ಈ-ಮೇಲ್ ವಾಟ್ಸ್ ಆಪ್, ಹಾಗೂ ಇತರೆ ಆನ್‌ಲೈನ್ ಸಂವಹನಗಳ ಮುಖಾಂತರ ಜಾರಿಗೊಳಿಸುವುದು.
- ವಾರೆಂಟ್ ಆಸಾಮಿಯನ್ನು ಒಂದು ವೇಳೆ ಠಾಣೆಗೆ ಕರೆದುಕೊಂಡು ಬಂದಿದ್ದರೆ, ನ್ಯಾಯಾಲಯಕ್ಕೆ ಹಾಜರುಪಡಿಸಿದ ನಂತರ ಆಸಾಮಿಯು ಉಳಿದಿದ್ದ ಸ್ಥಳವನ್ನು ಸೋಂಕು ನಿವಾರಕದಿಂದ ಶುಚಿಗೊಳಿಸುವುದು.

4.7 **ಪ್ರೊಕ್ಲಮೇಷನ್/ಜಪ್ತಿಯ ವಾರೆಂಟ್ ಕಾರ್ಯಗತಗೊಳಿಸುವ ಅಧಿಕಾರಿ/ಸಿಬ್ಬಂದಿಗಳು ಅನುಸರಿಸಬೇಕಾದ ಕ್ರಮಗಳು:**

- ಪ್ರೊಕ್ಲಮೇಷನ್ ಆದೇಶಗಳನ್ನು ಸಾರ್ವಜನಿಕ ಸ್ಥಳದಲ್ಲಿ ಪ್ರಚಾರ ಪಡಿಸುವಾಗ ಹಾಗೂ ಟಾಂಟಾಂ ಮಾಡುವಾಗ ಸಾಮಾಜಿಕ ಅಂತರ ಕಾಪಾಡಿಕೊಂಡು ಸುರಕ್ಷತಾ ಕ್ರಮಗಳನ್ನು ಅನುಸರಿಸುವುದು.

- ಪ್ರೊಕ್ಲಮೇಷನ್ ಆಸಾಮಿಗೆ ಸಂಬಂಧಿಸಿದ ಸ್ಥಿರ/ಚರ ಆಸ್ತಿಗಳ ಪರಿಶೀಲನೆ ಸಮಯದಲ್ಲಿ ಸಹಾ ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳೊಂದಿಗೆ ವ್ಯವಹರಿಸುವಾಗ ಸಾಮಾಜಿಕ ಅಂತರ ಕಾಪಾಡಿಕೊಳ್ಳುವುದು ಹಾಗೂ ಮಾಸ್ಕ್ ಧರಿಸುವುದು.
- ಪ್ರೊಕ್ಲಮೇಷನ್ ಜಾರಿ ಮಾಡುವ ಸಂದರ್ಭದಲ್ಲಿ ಮಹಜರ್ ಬರೆಯುವಾಗ, ಪಂಚರೊಂದಿಗೆ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು. ಆ ಸಂದರ್ಭದಲ್ಲಿ ಬಳಸಲಾದ ಎಲ್ಲಾ ಲೇಖನಿಗಳನ್ನು ಸ್ಯಾನಿಟೈಸ್ ಮಾಡುವುದು.
- ಒಂದು ವೇಳೆ ಪ್ರೊಕ್ಲಮೇಷನ್ / ಎಫ್.ಐ.ಆರ್ ಪಟ್ಟಿಯಲ್ಲಿ ಆಸಾಮಿಯು ಸಿಕ್ಕಿದಾಗ ಮಾಸ್ಕ್ ಮತ್ತು ಗ್ಲೌಸ್‌ಗಳನ್ನು ಧರಿಸಿ ದಸ್ತಗಿರಿ ಮಾಡುವುದು. ಆರೋಪಿಗೂ ಸಹಾ ಮಾಸ್ಕ್ ಧರಿಸುವಂತೆ ನೋಡಿಕೊಳ್ಳುವುದು.
- ಆರೋಪಿಯನ್ನು ಕೋವಿಡ್ ಪರೀಕ್ಷೆ ಮಾಡಿಸಿ ನ್ಯಾಯಾಲಯಕ್ಕೆ ಹಾಜರುಪಡಿಸುವುದು.

5 ತನಿಖಾ ವಿಭಾಗ

ಕೋವಿಡ್-19 ಸಾಂಕ್ರಾಮಿಕರೋಗ ಹರಡುತ್ತಿರುವ ಹಿನ್ನಲೆಯಲ್ಲಿ ಪೊಲೀಸರು ದಾಖಲಾಗುವ ವಿವಿಧ ಅಪಘಾತ ಪ್ರಕರಣಗಳಲ್ಲಿ ತನಿಖೆ ಕೈಗೊಳ್ಳುವ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಸುರಕ್ಷತಾ ಕ್ರಮಗಳನ್ನೊಳಗೊಂಡ ಗುಣಮಟ್ಟದ ಕಾರ್ಯನಿರ್ವಹಣಾ ಪ್ರಕ್ರಿಯೆಗಳು.

5.1 ಠಾಣೆಯಲ್ಲಿ ದೂರು ಸ್ವೀಕರಿಸುವಾಗ

- ದೂರುದಾರರು ಠಾಣೆಗೆ ದೂರು ನೀಡಲು ಬರುವಾಗ ಅವರೊಂದಿಗೆ ಅವರ ಸಂಬಂಧಿಕರು, ಒಡನಾಡಿಗಳು, ಗುಂಪಾಗಿ ಠಾಣೆಗೆ ಬಂದು ದೂರು ನೀಡುವ ಸಾಧ್ಯತೆ ಇರುತ್ತದೆ. ಈ ಸಮಯದಲ್ಲಿ ದೂರುದಾರರು/ನೊಂದವರು ಮಾತ್ರ ಠಾಣೆಯನ್ನು ಪ್ರವೇಶಿಸಲು ಅನುಮತಿಯನ್ನು ನೀಡುವುದು.
- ಠಾಣೆಯಲ್ಲಿ ಇಟ್ಟಿರುವ ಸೋಪು/ಸ್ಯಾನಿಟೈಸರ್‌ನಿಂದ ಕೈಗಳನ್ನು ಕಡ್ಡಾಯವಾಗಿ ತೊಳೆದುಕೊಂಡು ಠಾಣೆಗೆ ಪ್ರವೇಶಿಸುವಂತೆ ತಿಳಿಸುವುದು.
- ಠಾಣೆ ಪ್ರವೇಶಿಸುವ ಮುನ್ನ ಥರ್ಮಲ್ ಸ್ಕ್ರೀನಿಂಗ್ ಮಾಡುವುದು
- ಠಾಣೆಗೆ ದೂರು ನೀಡಲು ಬರುವ ದೂರುದಾರರು ಮಾಸ್ಕ್‌ನ್ನು ಕಡ್ಡಾಯವಾಗಿ ಧರಿಸುವುದು
- ಪೊಲೀಸ್ ಠಾಣೆಗಳಲ್ಲಿ ದೂರು ಸ್ವೀಕರಿಸಲು ಠಾಣೆಯ ಹೊರಗಡೆ ಸ್ಥಾಪಿಸಿರುವ ದೂರು ಸ್ವೀಕಾರ ಸ್ಥಳದಲ್ಲಿ ಕೂರಿಸಿ ದೂರು ಪಡೆಯುವುದು.
- ದೂರುದಾರರನ್ನು ವಿಚಾರಣೆ ಮಾಡುವಾಗ 15 ನಿಮಿಷಕ್ಕಿಂತ ಜಾಸ್ತಿ ಸಮಯ ತೆಗೆದುಕೊಳ್ಳಬಾರದು. ಇದರಿಂದ ಒಂದು ವೇಳೆ ಸೋಂಕಿತರಿದ್ದರೆ ಇತರರಿಗೆ ಸೋಂಕು ಹರಡುವುದನ್ನು ತಡೆಗಟ್ಟಬಹುದು.
- ದೂರು ಸ್ವೀಕರಿಸುವಾಗ ಕನಿಷ್ಠ 2 ಮೀಟರ್ ಅಂತರ ಕಾಯ್ದುಕೊಳ್ಳುವುದು ಇದಕ್ಕಾಗಿ ಎರಡು ಟೇಬಲ್‌ಗಳನ್ನು ಇಡುವುದು ಅಥವಾ 2 ಮೀಟರ್ ಅಂತರಕ್ಕೆ ಹಗ್ಗ ಕಟ್ಟುವುದು
- ದೂರುದಾರರಿಂದ ದೂರನ್ನು ಸ್ವೀಕರಿಸುವ ಸಮಯದಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಗಳು ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ದೂರು ಸ್ವೀಕರಿಸುವುದು.
- ಫಿರ್ಯಾದಿದಾರರು ನೀಡುವ ದೂರಿನ ಪ್ರತಿಯನ್ನು ಗ್ಲೌಸ್‌ಗಳನ್ನು ಧರಿಸಿ ಸ್ವೀಕರಿಸುವುದು ಹಾಗೂ ಸ್ವೀಕರಿಸಿದ ದೂರಿನ ಪ್ರತಿಯನ್ನು ಹಾಗೂ ಸಂಬಂಧಿತ ದಾಖಲೆಗಳನ್ನು ಕೂಡಲೇ ಸ್ಯಾನಿಟೈಸ್ ಮಾಡುವುದು.
- ದೂರುದಾರರು ಅನಕ್ಷರಸ್ಥರಾಗಿದ್ದಲ್ಲಿ ಅವರ ಹೇಳಿಕೆಯನ್ನು ಪಡೆಯುವಾಗ ಸಾಮಾಜಿಕ ಅಂತರ ಕಾಪಾಡಿಕೊಳ್ಳುವುದು

- ಎಫ್.ಐ.ಆರ್ ಪ್ರತಿಗೆ ಇ-ಪೆನ್ ಸಹಿ ಪಡೆಯುವಾಗ, ಸಹಿ ಮಾಡಿಸುವ ಮೊದಲು ಹಾಗೂ ನಂತರ ಇ-ಪೆನ್ ಹಾಗೂ ಎಲೆಕ್ಟ್ರಾನಿಕ್ ಉಪಕರಣಗಳನ್ನು ಸ್ಯಾನಿಟೈಸ್ ಮಾಡುವುದು
- ದೂರನ್ನು ಸ್ವೀಕರಿಸಿದ ನಂತರ ಪ್ರತಿ ದೂರುದಾರರು ಠಾಣೆಯಿಂದ ಹೊರ ಹೋದ ತಕ್ಷಣ ಅವರೊಂದಿಗೆ ಸಂಪರ್ಕದಲ್ಲಿದ್ದ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಗಳು ಸ್ಯಾನಿಟೈಸರ್‌ನ ಸಹಾಯದಿಂದ ಕೈಗಳನ್ನು ಶುಚಿಗೊಳಿಸಿಕೊಳ್ಳತಕ್ಕದ್ದು.

5.2 ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ದೂರು ಸ್ವೀಕರಿಸುವಾಗ

- ಸಂಜ್ಞೇಯ ಅಪರಾಧ ನಡೆದ ಬಗ್ಗೆ ದೂರವಾಣಿ ಮುಖಾಂತರ ಮಾಹಿತಿ ಬಂದಲ್ಲಿ ಸ್ಥಳಕ್ಕೆ ಹೋಗುವಾಗ ಪ್ರಕರಣದ ಗಂಭೀರತೆಗನುಗುಣವಾಗಿ ಸಾಧ್ಯವಾದಷ್ಟು ಕಡಿಮೆ ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಭೇಟಿ ನೀಡುವುದು.
- ಆನ್-ಲೈನ್ ಮೂಲ, ಕಂಟ್ರೋಲ್ ರೂಮ್‌ನಿಂದ ಮಾಹಿತಿ, ಸಾಕ್ಷಿದಾರರಿಂದ ಬಂದ ಮಾಹಿತಿ ಮೇರೆಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಕ್ರಮವಹಿಸುವುದು.
- ಘಟನಾ ಸ್ಥಳಕ್ಕೆ ಭೇಟಿ ನೀಡುವಾಗ ಹ್ಯಾಂಡ್ ಗ್ಲೌಸ್, ಮಾಸ್ಕ್‌ಗಳನ್ನು ಕಡ್ಡಾಯವಾಗಿ ಧರಿಸುವುದು ಹಾಗೂ ಪ್ರಕರಣದ ಗಂಭೀರತೆಗನುಗುಣವಾಗಿ ಪಿ.ಪಿ.ಇ ಕಿಟ್‌ಗಳನ್ನು ತೆಗೆದುಕೊಂಡು ಹೋಗುವುದು.
- ಸ್ಥಳಕ್ಕೆ ಭೇಟಿ ನೀಡಿದ ನಂತರ ಸದರಿ ಸ್ಥಳದಲ್ಲಿ ಯಾವುದೇ ವಸ್ತುಗಳನ್ನು ಮುಟ್ಟುವ ಮೊದಲು ಸ್ಯಾನಿಟೈಸ್ ಮಾಡುವುದು.
- ಸ್ಥಳದಲ್ಲಿ ಹಾಜರಿರುವ ಮಾಹಿತಿದಾರರು/ಸಾಕ್ಷಿದಾರರಿಂದ ದೂರು ಅಥವಾ ಹೇಳಿಕೆ ಪಡೆಯುವಾಗ ಸಾಮಾಜಿಕ ಅಂತರ ಕಾಪಾಡಿಕೊಳ್ಳುವುದು.
- ಅವರಿಂದ ದೂರು ಪಡೆಯುವ ಮೊದಲು ಸ್ಯಾನಿಟೈಸರ್ ನೀಡಿ ಅವರ ಕೈಗಳನ್ನು ಶುಚಿಗೊಳಿಸಿದ ನಂತರ ದೂರು ಪಡೆಯುವುದು.
- ದೂರು ಹಾಗು ಇತರೆ ಕಾಗದ ಪತ್ರಗಳಿಗೆ ಸಹಿ ಪಡೆಯುವಾಗ ತನಿಖಾಧಿಕಾರಿಗಳು ತಮ್ಮ ಪೆನ್ ನೀಡದೆ, ಅವರಿಗೆ ಪ್ರತ್ಯೇಕ ಪೆನ್ ನೀಡುವುದು ಹಾಗೂ ಆನಂತರ ಸದರಿ ಪೆನ್ನನ್ನು ಸ್ಯಾನಿಟೈಜ್ ಮಾಡುವುದು.
- ಸ್ಥಳದಲ್ಲಿ ಪಡೆದ ದೂರನ್ನು ಠಾಣೆಗೆ ಕೇಸು ದಾಖಲಿಸಲು ಕಳುಹಿಸುವಾಗ ಸ್ಯಾನಿಟೈಜ್ ಮಾಡಿ ಕಳುಹಿಸುವುದು.

5.3 ಕೃತ್ಯ ನಡೆದ ಸ್ಥಳದ ಪಂಚನಾಮೆ ಸಂದರ್ಭದಲ್ಲಿ

- ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡುವಾಗ ಹ್ಯಾಂಡ್ ಗ್ಲೌಸ್, ಮಾಸ್ಕ್‌ನ್ನು ಕಡ್ಡಾಯವಾಗಿ ಧರಿಸುವುದು ಹಾಗೂ ಪ್ರಕರಣದ ಗಂಭೀರತೆಗನುಗುಣವಾಗಿ ಪಿ.ಪಿ.ಇ ಕಿಟ್‌ಗಳನ್ನು ತೆಗೆದುಕೊಂಡು ಹೋಗುವುದು.
- ಸ್ಥಳಕ್ಕೆ ಹೋಗುವಾಗ ಪ್ರಕರಣದ ಗಂಭೀರತೆಗನುಗುಣವಾಗಿ ಸಾಧ್ಯವಾದಷ್ಟು ಕಡಿಮೆ ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಭೇಟಿ ನೀಡುವುದು.
- ಕೃತ್ಯ ಸ್ಥಳದ ಮಹಜರಿಗೆ ತೆರಳಿದ ಸಮಯದಲ್ಲಿ ಕೃತ್ಯ ಸ್ಥಳದಲ್ಲಿ ಸಾಕಷ್ಟು ಜನರು ಸೇರುವ ಸಾಧ್ಯತೆ ಇರುತ್ತದೆ. ಆ ಸಮಯದಲ್ಲಿ ಸಂಬಂಧಪಟ್ಟ ಪಂಚರು/ಸಾಕ್ಷಿದಾರರಿಗೆ ಫೋನ್ ಮುಖಾಂತರ ಸಂಪರ್ಕಿಸಿ ಪಂಚರನ್ನು/ದೂರುದಾರರನ್ನು/ನೊಂದವರನ್ನು ಹೊರತುಪಡಿಸಿ, ಬೇರೆ ಯಾವ ಅನವಶ್ಯಕ ವ್ಯಕ್ತಿಗಳು ಸೇರದಂತೆ ನೋಡಿಕೊಳ್ಳುವುದು.
- ಕೃತ್ಯ ನಡೆದ ಸ್ಥಳವನ್ನು ಸಾಕ್ಷ್ಯ ನಾಶವಾಗದಂತೆ ಟೇಪ್ ಬಳಸಿ ಸಂರಕ್ಷಿಸುವುದು.
- ಸ್ಥಳದಲ್ಲಿ ಪಂಚಾಯಿತಿದಾರರನ್ನು ಬರಮಾಡಿಕೊಂಡು ಅವರಿಗೆ ಹಾಗೂ ಫಿರ್ಯಾದುದಾರರಿಗೆ ಸ್ಯಾನಿಟೈಸರ್ ಸಹಾಯದಿಂದ ಕೈಗಳನ್ನು ಶುಚಿಗೊಳಿಸಿಕೊಳ್ಳಲು ಸೂಚಿಸುವುದು.

- ಕೃತ್ಯ ನಡೆದ ಸ್ಥಳದಲ್ಲಿ ಹಾಜರಿರುವ ಅಧಿಕಾರಿಗಳು, ಫಿರ್ಯಾದುದಾರರು, ಪಂಚರು, ತನಿಖಾ ಸಹಾಯಕ ಸಿಬ್ಬಂದಿಗಳು, ಛಾಯಾಗ್ರಾಹಕರು, ಪರಸ್ಪರ ಸಾಮಾಜಿಕ ಅಂತರ ಕಾಪಾಡಿಕೊಳ್ಳುವುದು.
- ಅಪರಾಧ [illegible] ಗಳನ್ನು, ಆಯುಧಗಳನ್ನು ಪರಿಶೀಲಿಸುವ ಸಮಯದಲ್ಲಿ ಕಡ್ಡಾಯವಾಗಿ ಕೈಗವಸು [illegible] ಧರಿಸಬೇಕು. ಯಾವುದೇ [illegible] ಸ್ಥಳಕ್ಕೆ [illegible] ಪ್ಲಾಸ್ಟಿಕ್ [illegible] ಹಾಕಿ [illegible] ಕಳುಹಿಸಿಕೊಡುವುದು.
- ಸ್ಥಳದಲ್ಲಿ [illegible] ಪ್ರಕ್ರಿಯೆಗೆ ಬಳಸಲಾಗುವ [illegible], ನಡೆದ ನಂತರ ಎಲ್ಲಾ ಉಪಕರಣ ಮತ್ತು ವಸ್ತುಗಳನ್ನು ಮತ್ತು ಸ್ಯಾನಿಟೈಸರ್‌ನಿಂದ ಕೈಗಳನ್ನು ಸ್ವಚ್ಛಗೊಳಿಸಿಕೊಳ್ಳುವುದು.
- ಘಟನಾ ಸ್ಥಳದಲ್ಲಿ ವಿಶೇಷವಾಗಿ 60 ವರ್ಷ ಮೇಲ್ಪಟ್ಟವರು ಮತ್ತು 10 ವರ್ಷ ಒಳಗಿನ ಮಕ್ಕಳನ್ನು ಯಾವುದೇ ಕಾರಣಕ್ಕೂ ಅಂತಹ ಪ್ರದೇಶಗಳಿಂದ ದೂರ ಇರುವಂತೆ ಎಚ್ಚರವಹಿಸುವುದು.
- ಯಾವುದೇ ಕಾರಣಕ್ಕೂ ಮುಖದ ಭಾಗಗಳನ್ನು ಮುಟ್ಟಿಕೊಳ್ಳಬಾರದು.

5.4 ಕೃತ್ಯ ನಡೆದ ಸ್ಥಳದಲ್ಲಿ ಭೌತಿಕ ಸಾಕ್ಷ್ಯಾಧಾರಗಳನ್ನು ಅಮಾನತ್ತು ಪಡಿಸುವ ಸಂದರ್ಭದಲ್ಲಿ:

- ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅಸ್ವಾಭಾವಿಕ ಸಾವು, ಅಪಘಾತ, ಇತ್ಯಾದಿ ಪ್ರಕರಣಗಳಲ್ಲಿ ಮಾನವನ ರಕ್ತ ಮತ್ತು ಇತರೆ ಜೈವಿಕ ಸಾಕ್ಷ್ಯಾಧಾರ ಸಂಗ್ರಹಿಸುವ ಸಂದರ್ಭದಲ್ಲಿ ಸಾಧ್ಯವಾದಷ್ಟು ಸ್ಥಳೀಯ ವೈದ್ಯಾಧಿಕಾರಿಗಳ ನೆರವು ಪಡೆದುಕೊಳ್ಳುವುದು.
- ಜೈವಿಕ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸುವಾಗ ಸ್ಯಾನಿಟೈಸರ್ ಹಾಗೂ ಇತರೆ ಸುರಕ್ಷಾ ಸಾಧನಗಳನ್ನು ಉಪಯೋಗಿಸುವಾಗ ಮೂಲ ಜೈವಿಕ ಸಾಕ್ಷ್ಯವು ಯಾವುದೇ ರೀತಿಯ ಕಲುಷಿತಗೊಳ್ಳದಂತೆ ವೈದ್ಯಾಧಿಕಾರಿಗಳೊಂದಿಗೆ ಸಮಾಲೋಚಿಸಿ ಕ್ರಮವಹಿಸುವುದು.
- ತನಿಖಾಧಿಕಾರಿಗಳು, ತನಿಖೆಗೆ ಸಹಾಯಕವಾಗುವ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಳ್ಳುವ ಸಂದರ್ಭದಲ್ಲಿ ಬರಿಗೈನಿಂದ ಮುಟ್ಟದೇ ಗ್ಲೌಸ್ ಧರಿಸುವುದು ಹಾಗೂ ಪಿ.ಪಿ. ಕಿಟ್ ಉಪಕರಣಗಳನ್ನು ಬಳಸಿ ವಶಕ್ಕೆ ಪಡೆಯುವುದು.
- ಅಮಾನತ್ತು ಪಡಿಸಿಕೊಂಡ ವಸ್ತುಗಳನ್ನು ಕಡ್ಡಾಯವಾಗಿ ಸ್ಯಾನಿಟೈಸ್ ಮಾಡುವುದು.
- ಕೃತ್ಯ ನಡೆದ ಸ್ಥಳಗಳಲ್ಲಿ ಅನಾವಶ್ಯಕವಾಗಿ ಎಲ್ಲಾ ವಸ್ತುಗಳನ್ನು ಸಾಮಾನ್ಯ ಪ್ರಕ್ರಿಯೆಯಂತೆ (Rotinue duty) ಅಮಾನತ್ತು ಪಡಿಸಿಕೊಳ್ಳದೆ ತನಿಖೆಗೆ ಅವಶ್ಯವಿರುವ ಸಾಕ್ಷ್ಯಾಧಾರವನ್ನು ಮಾತ್ರ ಅಮಾನತ್ತು ಪಡಿಸಿಕೊಳ್ಳುವುದು.
- ಅಮಾನತ್ತು ಪಡಿಸಿಕೊಂಡ ಪ್ರತಿಯೊಂದು ವಸ್ತುವನ್ನು ಪ್ರತ್ಯೇಕ ಸ್ಯಾನಿಟೈಸ್ ಮಾಡಿದ ಬಟ್ಟೆ ಚೀಲಗಳು / ರಟ್ಟಿನ ಬಾಕ್ಸ್‌ಗಳು / ಪ್ಲಾಸ್ಟಿಕ್ ಡಬ್ಬಗಳು/ ಪ್ಲಾಸ್ಟಿಕ್ ಕವರ್‌ಗಳಲ್ಲಿ ಸಂದರ್ಭಾನುಸಾರ ಸ್ಥಳದಲ್ಲೇ ಪ್ಯಾಕ್ ಮಾಡಿ ವಶಕ್ಕೆ ಪಡೆಯುವುದು.

5.5 ಶೋಧನೆ / ವಸ್ತುಗಳ ಜಪ್ತಿ ಮಾಡುವ ಸಂದರ್ಭದಲ್ಲಿ

ಮನೆಯನ್ನು ಶೋಧನೆ ಮಾಡುವ ಸಮಯದಲ್ಲಿ ಸಾಕ್ಷಿ ಮಹಜರುದಾರರು ಹಾಗೂ ಪಂಚರು ಮಾತ್ರ ಸಾಮಾಜಿಕ ಅಂತರ ಕಾಪಾಡಿಕೊಳ್ಳುವುದು. ಮನೆ ಶೋಧನೆ ಮಾಡುವ ಸಮಯದಲ್ಲಿ ಕುಟುಂಬದ ಮನೆಯವರು ಪ್ರತಿರೋಧಿಸುವ ಸಾಧ್ಯತೆ ಇದ್ದು, ಇದರಿಂದ ಸಾರ್ವಜನಿಕರು ಗುಂಪುಗೂಡುವ ಸಾಧ್ಯತೆ ಇರುತ್ತದೆ. ಅದನ್ನು ತಪ್ಪಿಸುವುದು. ಈ ಸಮಯದಲ್ಲಿ ಗ್ಲೌಸ್, ಮಾಸ್ಕ್, Face Shield ತೆಗೆಯಬಾರದು

ಮತ್ತು ದೇಹದ ಭಾಗಗಳನ್ನು ಮುಟ್ಟಬಾರದು. ಶೋಧನೆ/ವಸ್ತುಗಳ ಜಪ್ತಿ ಸಮಯದಲ್ಲಿ ಈ ಕೆಳಗಿನ ಸೂಚನೆಗಳನ್ನು ಕಡ್ಡಾಯವಾಗಿ ಅನುಸರಿಸುವುದು.

- ಶೋಧನೆಗೆ ಅವಶ್ಯವಿದ್ದಷ್ಟು ಸಿಬ್ಬಂದಿಯವರನ್ನು ಮಾತ್ರ ಕರೆದುಕೊಂಡು ಹೋಗತಕ್ಕದ್ದು.
- ಮನೆಯನ್ನು ಶೋಧನೆ ಮಾಡುವ ಸಮಯದಲ್ಲಿ ಮನೆಯ ಮಾಲೀಕರು ಹಾಗೂ ಪಂಚರು ಮಾತ್ರ ಹಾಜರಿರುವಂತೆ ನೋಡಿಕೊಳ್ಳುವುದು.
- ಮನೆಯನ್ನು ಶೋಧನೆ ಮಾಡುವ ಸಮಯದಲ್ಲಿ ಹ್ಯಾಂಡ್ ಗ್ಲೌಸ್, ಫೇಸ್ ಮಾಸ್ಕ್, Face Shield ಕಡ್ಡಾಯವಾಗಿ ಧರಿಸುವುದು.
- ಅನಾವಶ್ಯಕ ವ್ಯಕ್ತಿಗಳು ಸೇರದಂತೆ ನೋಡಿಕೊಳ್ಳುವುದು.
- ಅನಾವಶ್ಯಕ ವಸ್ತುಗಳನ್ನು ಮುಟ್ಟದೆ ಕೇವಲ ತನಿಖೆಗೆ ಅವಶ್ಯಕವಿರುವ ವಸ್ತುಗಳನ್ನು ಮಾತ್ರ ವಶಪಡಿಸಿಕೊಳ್ಳಲು ಕ್ರಮ ಕೈಗೊಳ್ಳುವುದು.
- ಯಾವುದೇ ಸ್ಥಳವನ್ನು ಪ್ರವೇಶಿಸುವ ಮೊದಲು ಅಧಿಕಾರಿ ಮತ್ತು ಸಿಬ್ಬಂದಿಯವರು ಹಾಗೂ ಫಿರ್ಯಾದಿದಾರರು, ಪಂಚಾಯತಿದಾರರು ಕಡ್ಡಾಯವಾಗಿ ಸೋಪು ಮತ್ತು ಸ್ಯಾನಿಟೈಸರ್‌ನಿಂದ ಕೈ ಕಾಲುಗಳನ್ನು ತೊಳೆದು ಪ್ರವೇಶಿಸುವುದು.
- ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು.
- ಸರಕು ಸಾಗಾಣಿಕೆ ವಾಹನಗಳನ್ನು ಪರಿಶೀಲಿಸುವಾಗ ವಾಹನದ ಚಾಲಕ ಅಥವಾ ಕ್ಲೀನರ್ ಕಡೆಯಿಂದಲೇ ವಸ್ತುಗಳನ್ನು ತೆಗೆಸಿ ದೂರದಲ್ಲಿ ನಿಂತು ಪರಿಶೀಲನೆ ಮಾಡುವುದು. ಯಾವುದೇ ಕಾರಣಕ್ಕೂ ಚಾಲಕ ಮತ್ತು ಕ್ಲೀನರ್‌ನ ಸನಿಹಕ್ಕೆ ಹೋಗಬಾರದು.
- ಶೋಧನೆ ಮಾಡಬೇಕಾದ ಅಧಿಕಾರಿ ಮತ್ತು ಸಿಬ್ಬಂದಿಗಳು ಗ್ಲೌಸ್, ಮಾಸ್ಕ್, Face Shield ಗಳನ್ನು ಕಡ್ಡಾಯವಾಗಿ ಧರಿಸುವಂತೆ ನೋಡಿಕೊಳ್ಳುವುದು.
- ವಶಪಡಿಸಿಕೊಂಡ ವಸ್ತುಗಳು ಹಾಗೂ ಆಯುಧಗಳನ್ನು, ಯಾವುದೇ ವ್ಯಕ್ತಿಗಳ ನೇರ ಸಂಪರ್ಕಕ್ಕೆ ಬರದಂತೆ ನೇರವಾಗಿ ಪ್ಲಾಸ್ಟಿಕ್ ಬ್ಯಾಗ್‌ಗಳಿಗೆ ಹಾಕಿ ಮುಂಜಾಗ್ರತೆ ವಹಿಸಿ ಸ್ಥಾನಕ್ಕೆ ತೆಗೆದುಕೊಳ್ಳುವುದು.
- ವಾಹನಗಳನ್ನು ಜಪ್ತಿ ಮಾಡಬೇಕಾದ ಸಂದರ್ಭದಲ್ಲಿ ಗ್ಲೌಸ್ ಧರಿಸಿಕೊಂಡೇ ಮುಟ್ಟತಕ್ಕದ್ದು.
- ವಶಪಡಿಸಿಕೊಂಡ ವಾಹನಗಳನ್ನು ಅಗ್ನಿಶಾಮಕ ದಳದ ಸಿಬ್ಬಂದಿಯವರಿಂದ ರಾಸಾಯನಿಕ ದ್ರಾವಣ ಸಿಂಪಡಿಸಿ ಸೋಂಕು ಮುಕ್ತ ಮಾಡಿಸುವುದು.
- ವಶಪಡಿಸಿಕೊಂಡಿರುವ ಮಾಲುಗಳನ್ನು ಠಾಣೆಗೆ ತಂದು ಬೇರೆ ಸಿಬ್ಬಂದಿಯವರಿಗೆ ಸಂಪರ್ಕಕ್ಕೆ ಸಿಗದ ಹಾಗೆ ಇಡತಕ್ಕದ್ದು.
- ತಪಾಸಣೆ ಮಾಡಬೇಕಾದ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ವಾಹನದಲ್ಲಿರುವ ವ್ಯಕ್ತಿಗಳ ಹತ್ತಿರಕ್ಕೆ ಹೋಗಕೂಡದು.
- ಶೋಧನೆ ಹಾಗೂ ಜಪ್ತಿ ಪ್ರಕ್ರಿಯೆಯಲ್ಲಿ ಭಾಗಿಯಾದ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಯವರು ಜಪ್ತಿ ಪ್ರಕ್ರಿಯೆ ಮುಗಿದ ನಂತರ ಕಡ್ಡಾಯವಾಗಿ ಸೋಪು ಮತ್ತು ಸ್ಯಾನಿಟೈಸರ್‌ನಿಂದ ಕೈಗಳನ್ನು ಶುಚಿಗೊಳಿಸಿಕೊಳ್ಳುವುದು.

5.6 ಸಾಕ್ಷಿದಾರರ ವಿಚಾರಣೆ:

- ಸಾಧ್ಯವಾದಷ್ಟು ಮಟ್ಟಿಗೆ ಸಾಕ್ಷಿದಾರರ ವಿಚಾರಣೆಯನ್ನು ಕೃತ್ಯ ನಡೆದ ಸ್ಥಳದ ಅಕ್ಕ ಪಕ್ಕದಲ್ಲಿಯೇ ಸುರಕ್ಷಿತ ಸ್ಥಳವನ್ನು ಗುರುತಿಸಿ, ಕನಿಷ್ಠ 2 ಮೀಟರ್ ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ವಿಚಾರಣೆ ಮಾಡುವುದು ಹಾಗೂ ಹೇಳಿಕೆ ದಾಖಲಿಸಿಕೊಳ್ಳುವುದು.
- ಸಾಕ್ಷಿದಾರರ ವಿಚಾರಣೆ ಸಂದರ್ಭದಲ್ಲಿ ಸಂಬಂಧಪಟ್ಟ ಬೀಟ್ ಸಿಬ್ಬಂದಿಯವರನ್ನು ನೇಮಿಸಿಕೊಂಡು ಸ್ಥಳೀಯರ ಸಹಕಾರದೊಂದಿಗೆ ಹೇಳಿಕೆ ಪಡೆಯುವುದು.
- ಸಾಕ್ಷಿದಾರರು ಹಾಗೂ ತನಿಖಾಧಿಕಾರಿಗಳು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು.
- ಸಾಕ್ಷಿದಾರರ ಹೇಳಿಕೆ ಪಡೆಯುವುದು ಸ್ಥಳದಲ್ಲಿ ಸಾಧ್ಯವಾಗದ ಪರಿಸ್ಥಿತಿಯಲ್ಲಿ ಮಾತ್ರ ಠಾಣೆಗೆ ಕರೆಸುವುದು.
- ಠಾಣೆಯಲ್ಲಿ ಹೇಳಿಕೆಗಳನ್ನು ದಾಖಲಿಸಿಕೊಳ್ಳುವಾಗ ಸಾಕ್ಷಿದಾರರನ್ನು ಠಾಣೆಯಲ್ಲಿ ಎಲ್ಲಾ ಕಡೆ ಓಡಾಡಲು ಬಿಡದೆ ಒಂದು ನಿರ್ದಿಷ್ಟ ಕೊಠಡಿ ಅಥವಾ ಸಂದರ್ಶಕರ ಕೊಠಡಿಯಲ್ಲಿ ಕೂರಿಸಿ ಸಾಮಾಜಿಕ ಅಂತರ ಕಾಯ್ದುಕೊಂಡು ಹೇಳಿಕೆ ದಾಖಲಿಸುವುದು.
- ಒಬ್ಬ ಸಾಕ್ಷಿದಾರರ ವಿಚಾರಣೆ ಮಾಡಿದ ನಂತರ ಮತ್ತೊಬ್ಬರನ್ನು ವಿಚಾರಣೆಮಾಡುವ ಮೊದಲು ಸದರಿ ಸ್ಥಳವನ್ನು ಸ್ಯಾನಿಟೈಸ್ ಮಾಡಿಸಿ ನಂತರ ವಿಚಾರಣೆ ಮಾಡುವುದು.
- 60 ವರ್ಷ ಮೀರಿದ ಹಾಗೂ 10 ವರ್ಷದೊಳಗಿನ ಸಾಕ್ಷಿದಾರರನ್ನು ಮತ್ತು ಮಹಿಳಾ ಸಾಕ್ಷಿದಾರರನ್ನು ಠಾಣೆಗೆ ಕರೆಸದೆ ಅವರಿಗೆ ಅನುಕೂಲವಾಗುವ ಸ್ಥಳಕ್ಕೆ ಭೇಟಿ ನೀಡಿ ಹೇಳಿಕೆ ಪಡೆಯುವುದು.
- ಸಾಕ್ಷಿದಾರರನ್ನು ವಿಚಾರಣೆ ಮಾಡುವಾಗ 15 ನಿಮಿಷಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳಬಾರದು. ಇದರಿಂದ ಒಂದು ವೇಳೆ ಸೋಂಕಿತರಿದ್ದಲ್ಲಿ ಇತರರಿಗೆ ಸೋಂಕು ಹರಡುವುದನ್ನು ತಡೆಗಟ್ಟಬಹುದು.

5.7 ಆರೋಪಿಯ ದಸ್ತಗಿರಿ ಸಂದರ್ಭದಲ್ಲಿ:

- 7 ವರ್ಷಕ್ಕಿಂತ ಕಡಿಮೆ ಶಿಕ್ಷೆ ಇರುವ ಪ್ರಕರಣಗಳಲ್ಲಿ ಸಾಮಾನ್ಯವಾಗಿ ದಸ್ತಗಿರಿ ಮಾಡುವ ಅವಶ್ಯಕತೆ ಇರುವುದಿಲ್ಲ.
- ಆರೋಪಿಯನ್ನು ದಸ್ತಗಿರಿ ಮಾಡಲು ನಿಯೋಜಿಸುವ ಅಧಿಕಾರಿ ಮತ್ತು ಸಿಬ್ಬಂದಿಗಳು ಯಾವುದೇ ಕಾರಣಕ್ಕೂ ಠಾಣೆಯ ಇತರ ಸಿಬ್ಬಂದಿಗಳಿಂದ ಅಂತರವನ್ನು ಕಾಯ್ದುಕೊಳ್ಳುವುದು ಸಾಧ್ಯವಾದಷ್ಟು 50 ವರ್ಷ ಮೀರದ ಸಿಬ್ಬಂದಿಗಳನ್ನು ಕರ್ತವ್ಯಕ್ಕೆ ನೇಮಿಸುವುದು.
- ಆರೋಪಿಯನ್ನು ದಸ್ತಗಿರಿ ಮಾಡುವ ಸಮಯದಲ್ಲಿ ದಸ್ತಗಿರಿ ಪ್ರಕ್ರಿಯೆಯಲ್ಲಿ ಭಾಗಿಯಾಗುವ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಯವರು ಪೂರ್ಣ ತೋಳಿನ ಸಮವಸ್ತ್ರ, ಮಾಸ್ಕ್ ಮತ್ತು ಹ್ಯಾಂಡ್ ಗ್ಲೌಸ್‌ಗಳನ್ನು ಧರಿಸಬೇಕು.
- ಆರೋಪಿಯನ್ನು [illegible] ಸ್ಯಾನಿಟೈಸರ್‌ನಿಂದ ಕೈಗಳನ್ನು ಶುಚಿಗೊಳಿಸುವುದು ಹಾಗೂ ಮಾಸ್ಕ್ ಧರಿಸುವಂತೆ ನೋಡಿಕೊಳ್ಳುವುದು. ಒಂದು ವೇಳೆ ಆರೋಪಿಯ ಬಳಿ ಮಾಸ್ಕ್ ಇಲ್ಲದಿದ್ದಲ್ಲಿ [illegible] ಮೂಲಕ ಮೂಗು ಮತ್ತು ಬಾಯಿಯನ್ನು ಮುಚ್ಚಿಕೊಳ್ಳುವಂತೆ ನೋಡಿಕೊಳ್ಳುವುದು.
- ಆರೋಪಿಯ [illegible] ಸಿಬ್ಬಂದಿಯು [illegible] ಅವಶ್ಯಕತೆ [illegible] ಸ್ಯಾನಿಟೈಸರ್, ಗ್ಲೌಸ್ ಮತ್ತು ಮಾಸ್ಕ್ [illegible].

- [illegible]
- ಆರೋಪಿಯು ಕೋವಿಡ್ ಪಾಸಿಟಿವ್ ಎಂದು ತಿಳಿದು ಬಂದಲ್ಲಿ ಕಡ್ಡಾಯವಾಗಿ ಪಿ.ಪಿ.ಇ. ಧರಿಸಿ ದಸ್ತಗಿರಿ ಮಾಡುವುದು ಹಾಗೂ ಮುಂದಿನ ಕ್ರಮ ಕುರಿತು ಹತ್ತಿರದ ವೈದ್ಯಾಧಿಕಾರಿಗಳಿಂದ ಕೋವಿಡ್ ಪರೀಕ್ಷೆಗೊಳಪಡಿಸುವುದು.
- ಆರೋಪಿಯ ಅಂಗಶೋಧನೆ ಮಾಡುವ ಸಮಯದಲ್ಲಿ ಕಡ್ಡಾಯವಾಗಿ ಮಾಸ್ಕ್ ಮತ್ತು ಹ್ಯಾಂಡ್ ಗ್ಲೌಸ್‌ಗಳನ್ನು ಧರಿಸಬೇಕು.
- ಆರೋಪಿಯ ಬಳಿಯಲ್ಲಿದ್ದ ಯಾವುದಾದರೂ ವಸ್ತುಗಳನ್ನು ವಶ ಪಡಿಸಿಕೊಳ್ಳುವ ಸಂದರ್ಭದಲ್ಲಿ ನೇರವಾಗಿ ಸಂಪರ್ಕಕ್ಕೆ ಬಾರದ ರೀತಿಯಲ್ಲಿ ಹ್ಯಾಂಡ್ ಗ್ಲೌಸ್ ಉಪಯೋಗಿಸಿ ಪ್ಲಾಸ್ಟಿಕ್ ಚೀಲಕ್ಕೆ ವರ್ಗಾಯಿಸಿ ವಶಪಡಿಸಿಕೊಳ್ಳುವುದು.
- ಆರೋಪಿಯನ್ನು ಸಾಧ್ಯವಾದಷ್ಟು ಲಾಕಪ್‌ನಲ್ಲಿಡದೇ ಅದೇ ದಿವಸ ನ್ಯಾಯಾಲಯಕ್ಕೆ ಹಾಜರುಪಡಿಸಲು ಕ್ರಮ ಕೈಗೊಳ್ಳುವುದು.
- ಲಾಕಪ್‌ನಲ್ಲಿಡುವುದು ಅನಿವಾರ್ಯವಾದ ಸಂದರ್ಭದಲ್ಲಿ ಇತರೆ ಯಾವ ಸಿಬ್ಬಂದಿಗಳು ಅವರ ಸಂಪರ್ಕಕ್ಕೆ ಬಾರದಂತೆ ಎಚ್ಚರಿಕೆ ವಹಿಸುವುದು ಮತ್ತು ಆರೋಪಿಯು ಪದೇ ಪದೇ ಸೋಪು ಮತ್ತು ಸ್ಯಾನಿಟೈಸರ್ ನಿಂದ ಕೈಗಳನ್ನು ತೊಳೆದುಕೊಳ್ಳುವಂತೆ ನೋಡಿಕೊಳ್ಳುವುದು.
- ಆರೋಪಿಯು ಊಟ [illegible] ಸಂದರ್ಭದಲ್ಲಿ ಕಡ್ಡಾಯವಾಗಿ [illegible] ಹ್ಯಾಂಡ್ ಗ್ಲೌಸ್, ಮಾಸ್ಕ್ ಹಾಗೂ ಅವಶ್ಯವಿದ್ದಲ್ಲಿ ಪಿ.ಪಿ.ಇ ಕಿಟ್ [illegible]
- ಆರೋಪಿಯು ಠಾಣೆಯಲ್ಲಿ ಓಡಾಡಿದ ಸ್ಥಳಗಳಲ್ಲಿ ಕಡ್ಡಾಯವಾಗಿ ರಾಸಾಯನಿಕ ದ್ರಾವಣ ಸಿಂಪಡಿಸಿ ಸೋಂಕು ಮುಕ್ತಗೊಳಿಸುವುದು.
- ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಪ್ರತ್ಯೇಕ ವಾಹನ ವ್ಯವಸ್ಥೆ ಮಾಡಿಸುವುದು.
- ಅಧಿಕಾರಿ ಮತ್ತು ಸಿಬ್ಬಂದಿಯವರೊಂದಿಗೆ ಆರೋಪಿಯು ನೇರ ಸಂಪರ್ಕಕ್ಕೆ ಬಾರದಂತೆ ಕ್ರಮ ವಹಿಸುವುದು.
- ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ಮುನ್ನ ಕೋವಿಡ್-19 ಪರೀಕ್ಷೆ ಮಾಡಿಸಿದ ನಂತರವೇ ನ್ಯಾಯಾಲಯಕ್ಕೆ ಹಾಜರುಪಡಿಸುವುದು.
- ಆರೋಪಿಯನ್ನು ದಸ್ತಗಿರಿ ಮಾಡಿದ ಸಂದರ್ಭದಿಂದ ನ್ಯಾಯಾಲಯಕ್ಕೆ ಹಾಜರುಪಡಿಸುವವರೆಗೆ ದಸ್ತಗಿರಿ ಪ್ರಕ್ರಿಯೆಯಲ್ಲಿ ಭಾಗಿಯಾದ ಅಧಿಕಾರಿ ಸಿಬ್ಬಂದಿಗಳೇ ಇರುವಂತೆ ನೋಡಿಕೊಳ್ಳುವುದು.
- ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ನಂತರ ಸಿಬ್ಬಂದಿಯವರು ಸ್ಯಾನಿಟೈಸರ್‌ನಿಂದ ಕೈಗಳನ್ನು ತೊಳೆದುಕೊಂಡು ಕಡ್ಡಾಯವಾಗಿ ಸ್ನಾನ ಮಾಡುವುದು.
- ಅಧಿಕಾರಿ ಮತ್ತು ಸಿಬ್ಬಂದಿಯವರು ದಸ್ತಗಿರಿ ಪ್ರಕ್ರಿಯೆಯಲ್ಲಿ ಭಾಗಿಯಾದವರು ಸ್ನಾನ ಮಾಡದೆ ಯಾವುದೇ ಕಾರಣಕ್ಕೂ ತಮ್ಮ ಕುಟುಂಬದ ಸದಸ್ಯರು ಹಾಗೂ ಇತರೆ ಸಿಬ್ಬಂದಿಯವರೊಂದಿಗೆ ಸೇರಬಾರದು.

- [illegible] ಸಾಗಿಸುವಾಗ ಸಾಧ್ಯವಾದರೆ ಬೇರೆ ವಿಭಾಗ ಅಥವಾ [illegible] ವ್ಯವಸ್ಥೆ ಮಾಡುವುದು. ಸದರಿ ವಾಹನದಲ್ಲಿ ಅರ್ಧ ಭಾಗಕ್ಕೆ [illegible] ಪಡಿಸಬೇಕು. ಒಂದು ಕಡೆ ಆರೋಪಿತರನ್ನು, ಮತ್ತೊಂದು ಭಾಗದಲ್ಲಿ [illegible] ಸುವುದು. ಇದರಿಂದ ಒಬ್ಬರಿಂದ ಮತ್ತೊಬ್ಬರಿಗೆ [illegible].

5.8 ಶವ ಪಂಚನಾಮೆಯ ಸಮಯದಲ್ಲಿ

- ಮೃತ ದೇಹವನ್ನು ಕೃತ್ಯ ನಡೆದ ಸ್ಥಳದಿಂದ ಸ್ಥಳಾಂತರಿಸುವ ಸಮಯದಲ್ಲಿ ಪಿ.ಪಿ.ಇ, ಮಾಸ್ಕ್, ಗ್ಲೌಸ್, ವೈಸರ್ ಕಡ್ಡಾಯವಾಗಿ ಧರಿಸಿರತಕ್ಕದ್ದು.
- ಶವ ದೊರೆತ ಸ್ಥಳದಲ್ಲಿ ಸಿಬ್ಬಂದಿಯವರನ್ನು [illegible] ಸ್ಥಳದಲ್ಲಿ [illegible] ಅಗ್ನಿಶಾಮಕ ದಳದ ಸಿಬ್ಬಂದಿಯವರಿಂದ [illegible] ಸ್ಥಳದ ಸುತ್ತಮುತ್ತ ರಾಸಾಯನಿಕ ದ್ರಾವಣವನ್ನು ಸಿಂಪಡಿಸುವುದು. ಮೃತ ದೇಹವನ್ನು ಸ್ಥಳಾಂತರಿಸಿದ ನಂತರ ಸದರಿ ಸ್ಥಳವನ್ನು ರಾಸಾಯನಿಕ ದ್ರಾವಣವನ್ನು ಸಿಂಪಡಿಸುವುದು.
- ಮೃತ ದೇಹವನ್ನು ಸುರಕ್ಷಿತ ವಿಧಾನಗಳೊಂದಿಗೆ ಸೀಮಿತ ಸಿಬ್ಬಂದಿಗಳ ಸಹಾಯದಿಂದ ವಾಹನದಲ್ಲಿ ಸಾಗಿಸುವುದು.
- ಸ್ಥಳೀಯ ವೈದ್ಯಾಧಿಕಾರಿಯವರು ಹಾಗೂ ಅವರ ಸಹಾಯಕರುಗಳ ಸಹಾಯ ಪಡೆದು ಶವವನ್ನು ಪರಿಶೀಲಿಸುವುದು.
- ಶವವನ್ನು ಮರಣೋತ್ತರ ಪರೀಕ್ಷೆ ಸಲುವಾಗಿ ಸಾಗಾಟ ಮಾಡುವ ಸಂದರ್ಭದಲ್ಲಿ ಯಾವುದೇ [illegible] ಕೈಯಿಂದ ಮುಟ್ಟಬಾರದು. ಸಾಧ್ಯವಾದಷ್ಟು [illegible] ಸಿಬ್ಬಂದಿಗಳ [illegible] ಸಾಗಾಟ ಮಾಡುವುದು. ನಂತರ [illegible] ವಾಹನವನ್ನು ಸಹ [illegible] ಮೂಲಕ ಅಥವಾ ರಾಸಾಯನಿಕ ದ್ರಾವಣವನ್ನು ಸಿಂಪಡಿಸಿ [illegible].
- ವೈದ್ಯಾಧಿಕಾರಿಯವರಿಂದ ಮೃತ ದೇಹವನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸುವ [illegible] ಕೋವಿಡ್-19 ಪರೀಕ್ಷೆಯ ಸಲುವಾಗಿ ಗಂಟಲುದ್ರವ/ರಕ್ತದ [illegible] ಮನವಿ ಮಾಡುವುದು. ವರದಿ ಸ್ವೀಕೃತಗೊಂಡ ನಂತರ ಮರಣೋತ್ತರ ಪರೀಕ್ಷೆಗೆ ಒಳಪಡಿಸುವುದು.
- ಮೃತ ವ್ಯಕ್ತಿಯ ಕೋವಿಡ್-19 ವರದಿ ಬರುವವರೆಗೆ ಮೃತ ದೇಹವನ್ನು ಸುರಕ್ಷಿತವಾಗಿ [illegible] ಇರಿಸಿ ಯಾರೂ ಮೃತ ದೇಹದ ಸಂಪರ್ಕ ಹೊಂದದಂತೆ ಎಲ್ಲಾ ಮುನ್ನೆಚ್ಚರಿಕೆ ವಹಿಸುವುದು.
- ಮೃತ ವ್ಯಕ್ತಿಯ [illegible] ಕೊರೋನಾ ಸೋಂಕು ಖಚಿತಪಟ್ಟಲ್ಲಿ ಕೂಡಲೇ ಮೃತ ದೇಹದ [illegible] ಕ್ವಾರಂಟೈನ್‌ಗೆ ಒಳಪಡಿಸಿ ಅವರುಗಳನ್ನು ಕೋವಿಡ್-19 ಪರೀಕ್ಷೆಗೆ ಒಳಪಡಿಸಲು ವೈದ್ಯಾಧಿಕಾರಿಗಳಿಗೆ ಮನವಿ ಮಾಡುವುದು.
- ಮೃತ ವ್ಯಕ್ತಿಯ ದೇಹದಲ್ಲಿ ಕೊರೋನಾ ಸೋಂಕು ಇರುವುದಾಗಿ ದೃಢಪಟ್ಟಲ್ಲಿ ವೈದ್ಯಾಧಿಕಾರಿಗಳ ಸಮಕ್ಷಮದಲ್ಲಿ ಸರ್ಕಾರದ ಮಾರ್ಗಸೂಚಿಗಳಂತೆ ಮೃತ ದೇಹಗಳನ್ನು ವಿಲೇವಾರಿ ಮಾಡುವಂತೆ ಕ್ರಮ ಕೈಗೊಳ್ಳುವುದು.
- ಕೊರೋನಾ ಸೋಂಕು ದೃಢಪಟ್ಟ ವ್ಯಕ್ತಿಯ ಶವ ಸಂಸ್ಕಾರದಲ್ಲಿ ಭಾಗವಹಿಸಿದ ಸಿಬ್ಬಂದಿಯು 6 ಅಡಿಗಳ ಸಾಮಾಜಿಕ ಅಂತರ ಕಾಯ್ದುಕೊಂಡು ಮೃತ ದೇಹದೊಂದಿಗೆ ನೇರ ಸಂಪರ್ಕ ಹೊಂದದಂತೆ ಎಚ್ಚರ ವಹಿಸುವುದು.

* ಮರಣೋತ್ತರ ಪರೀಕ್ಷಾ ಅವಧಿಯಲ್ಲಿ ಮೃತ [illegible] ಕಾರಣ ತಿಳಿಯಲು ವೈದ್ಯಾಧಿಕಾರಿಗಳಿಂದ ಸಂಗ್ರಹಿಸಲಾದ [illegible] ಪಿ.ಪಿ.ಇ. ಮಾಸ್ಕ್, ಗ್ಲೌಸ್ ಧರಿಸಿ ಹಾಗೂ ಇತರ ಸುರಕ್ಷಿತ ಕ್ರಮಗಳೊಂದಿಗೆ [illegible].
* ಶವ ತನಿಖೆ ಮುಗಿದ ತಕ್ಷಣ [illegible] ಮತ್ತು ಸಿಬ್ಬಂದಿಯವರು ಹ್ಯಾಂಡ್ ಗ್ಲೌಸ್ ಗಳನ್ನು ತೆಗೆದು [illegible] ಮಾಡಿದ ನಂತರ ಕುಟುಂಬ ಸದಸ್ಯರೊಂದಿಗೆ ಮತ್ತು ಸಹ ಸಿಬ್ಬಂದಿಗಳೊಂದಿಗೆ [illegible].
* ಕರ್ನಾಟಕ ಸರ್ಕಾರದ ಆರೋಗ್ಯ ಇಲಾಖೆಯ ಆದೇಶ ಸಂಖ್ಯೆ:ಮೇಣ್ [illegible] /ಸಿಎಸ್/63/20-21 ದಿನಾಂಕ 12.05.2020 ಅದೇಶದಂತೆ ಕೋವಿಡ್-19 [illegible] ಮೃತದೇಹಗಳನ್ನು ಸೂಕ್ತ ಮಾರ್ಗಸೂಚಿಗಳನ್ವಯ ವಿಲೇ ಮಾಡುವುದು.
* ಮೃತ ವ್ಯಕ್ತಿಗೆ ಕೋವಿಡ್-19 [illegible] ಮೃತದೇಹವನ್ನು [illegible] ಹಾಗೂ ಆರೋಗ್ಯ [illegible].
* ಮೃತದೇಹಗಳನ್ನು [illegible] ಪಿ.ಎಂ. ಆದ ನಂತರ [illegible] ಮೃತ ದೇಹವನ್ನು [illegible] ಬ್ಯಾಗ್/ ಚೀಲಗಳಲ್ಲಿ [illegible].

5.9 **ಅಪರಿಚಿತ ಮೃತದೇಹಗಳು ದೊರೆತಾಗ:**

* ಅಪರಿಚಿತ ಮೃತದೇಹವು ಪತ್ತೆಯಾದಾಗ ಸ್ಥಳಕ್ಕೆ ಭೇಟಿ ನೀಡುವ ಮೊದಲು ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಗಳು ಕಡ್ಡಾಯವಾಗಿ ಮಾಸ್ಕ್, ಗ್ಲೌಸ್ ಮತ್ತು [illegible] ಧರಿಸುವುದು.
* [illegible] ಸಂಪರ್ಕದಿಂದ ದೂರವಿರುವುದು.
* ಮೃತದೇಹ ದೊರೆತ ಸ್ಥಳದ ಸುತ್ತಮುತ್ತ ಸೋಂಕು ನಿವಾರಕ ಔಷಧಿಯನ್ನು ಸಿಂಪಡಿಸುವುದು.
* ಮೃತದೇಹವನ್ನು ಸಾಗಿಸಿದ ವಾಹನವನ್ನು ಸ್ಯಾನಿಟೈಸ್ ಮಾಡುವುದು.
* ಅಪರಿಚಿತ ಮೃತನ ಪತ್ತೆಗಾಗಿ ಕ್ರಮಕೈಗೊಳ್ಳುವುದು.
* ಅಪರಿಚಿತ ಮೃತನ ಪಿ.ಎಂ. ಮಾಡಿಸುವ ಮೊದಲು ಕೋವಿಡ್-19 ಪರೀಕ್ಷೆ ಮಾಡಿಸುವುದು ಹಾಗೂ ಅಲ್ಲಿಯ ವರೆಗೆ ಮೃತದೇಹವನ್ನು [illegible] ಪ್ಲಾಸ್ಟಿಕ್ ಬ್ಯಾಗ್‌ನಲ್ಲಿ 1% ಸೋಡಿಯಂ ಹೈಪೋಕ್ಲೋರೈಟ್ ದ್ರಾವಣವನ್ನು ಸಿಂಪಡಿಸಿ ಸಂರಕ್ಷಿಸುವುದು.
* ಒಂದು ವೇಳೆ ಮೃತನಿಗೆ ಕೋವಿಡ್-19 ಸೋಂಕು ದೃಢಪಟ್ಟಲ್ಲಿ, ಮೃತದೇಹವನ್ನು ಮುಂದಿನ ಕ್ರಮಕ್ಕಾಗಿ ಆರೋಗ್ಯಾಧಿಕಾರಿಗಳಿಗೆ ಹಸ್ತಾಂತರಿಸುವುದು.
* ಮೃತನ ಪಿ.ಎಂ. ಮುಗಿದ ನಂತರ ಆರೋಗ್ಯ ಇಲಾಖೆಯ ಕೋವಿಡ್-19 ಮೃತ ಶವ ವಿಲೇವಾರಿ ಮಾರ್ಗಸೂಚಿಗಳಂತೆ ಅಂತ್ಯ ಸಂಸ್ಕಾರ ಮಾಡುವುದು.

6 **ಸಂಚಾರ ವ್ಯವಸ್ಥೆಯ ಕರ್ತವ್ಯದ ವೇಳೆಯಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಗಳು ಅನುಸರಿಸಬೇಕಾದ ಗುಣಮಟ್ಟದ ಕಾರ್ಯನಿರ್ವಹಣಾ ಪ್ರಕ್ರಿಯೆಗಳು.**

6.1 **ಸ್ಥಳ ದಂಡ ವಸೂಲಿ ಮಾಡುವ ವೇಳೆಯಲ್ಲಿ ಅನುಸರಿಸಬೇಕಾದ ಕ್ರಮ**

* ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ವಾಹನ ತಪಾಸಣೆ ಮಾಡುವಾಗ ಕಡ್ಡಾಯವಾಗಿ ಮಾಸ್ಕ್, ಹ್ಯಾಂಡ್‌ಗ್ಲೌಸ್, ಸ್ಯಾನಿಟೈಸರ್, ಫೇಸ್ ಷೀಲ್ಡ್ [illegible].
* ಸಂಚಾರ ನಿಯಂತ್ರಣ ಕರ್ತವ್ಯ ನಿರ್ವಹಿಸುವಾಗ ಸಾರ್ವಜನಿಕರು ಮತ್ತು ವಾಹನ ಸವಾರರೊಂದಿಗೆ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು.

- ಕರ್ತವ್ಯದ ಅವಧಿಯಲ್ಲಿ ಬಾಡಿವೋರ್ನ್ ಕ್ಯಾಮೆರಾಗಳನ್ನು ಬಳಸುವುದು ಒಳಿತು ಅವಶ್ಯವಿದ್ದಲ್ಲಿ ಮೆಗಾಫೋನ್‌ಗಳನ್ನು ಬಳಸುವುದು ಹಾಗೂ ಅವಶ್ಯ ಸಂದರ್ಭಗಳಲ್ಲಿ ಮಾಹಿತಿಯನ್ನು ಕಂಟ್ರೋಲ್‌ರೂಂಗೆ ನೀಡುವುದು.
- ವಾಹನಗಳನ್ನು ನಿಲ್ಲಿಸುವಾಗ ಓಡಿಕೊಂಡು ಹೋಗಿ ತಡೆಯುವುದು, ವಾಹನದ ಕೀಗಳನ್ನು ಎತ್ತಿಕೊಳ್ಳುವುದು, ವಾಹನ ಚಾಲಕನನ್ನು ಮುಟ್ಟುವುದು ಮಾಡಬಾರದು.
- ನಿಯಮ ಉಲ್ಲಂಘನೆ ಮಾಡಿದ ವಾಹನಗಳ ಚಾಲನಾ ಪರವಾನಗಿ, ವಿಮೆ ಪತ್ರ, ವಾಹನದ ಇತರೆ ದಾಖಲಾತಿಗಳನ್ನು ತಪಾಸಣೆ ಮಾಡುವಾಗ ಕೈನಿಂದ ಮುಟ್ಟದೆ ಸೂಕ್ತ ಅಂತರವನ್ನು ಕಾಯ್ದುಕೊಳ್ಳುವುದು.
- ಮಳೆ ಬರುತ್ತಿರುವಾಗ ರೈನ್‌ಕೋಟ್ ಹಾಗೂ ಛತ್ರಿಗಳನ್ನು ಉಪಯೋಗಿಸುವುದು.
- ಪಾಯಿಂಟ್ ಕರ್ತವ್ಯದಲ್ಲಿ ಸಾರ್ವಜನಿಕರೊಂದಿಗೆ ಅನಾವಶ್ಯಕವಾಗಿ ಮಾತನಾಡಬಾರದು.
- ಯಾವುದಾದರೂ ನಿಯಮ ಉಲ್ಲಂಘನೆಗಳು ಕಂಡುಬಂದಲ್ಲಿ ಡಿಜಿಟ್ಯಾಬ್/ಎಫ್.ಟಿ.ವಿ.ಆರ್. ಮುಖಾಂತರ ಪ್ರಕರಣಗಳನ್ನು ದಾಖಲು ಮಾಡಲು ಕ್ರಮ ಕೈಗೊಳ್ಳುವುದು.
- ಪಾಯಿಂಟ್ ಕರ್ತವ್ಯದ ವೇಳೆಯಲ್ಲಿ ಯಾವುದಾದರೂ ವಾಹನ ಅಪಘಾತವಾದ ಸಂದರ್ಭದಲ್ಲಿ ಸಾರ್ವಜನಿಕರು ಗುಂಪು ಸೇರದಂತೆ ಹಾಗೂ ಸಾಮಾಜಿಕ ಅಂತರವನ್ನು ಕಾಪಾಡುವಂತೆ ಸೂಚಿಸುವುದು ಹಾಗೂ ಗುಂಪಿನ ಜೊತೆಯಲ್ಲಿ ಕರ್ತವ್ಯ ನಿರತ ಸಿಬ್ಬಂದಿಯವರು ಸೇರಿಕೊಳ್ಳದೆ ಸಾಮಾಜಿಕ ಅಂತರವನ್ನು ಕಾಪಾಡುವುದು ಹಾಗೂ ಬ್ಯಾರಿಕೇಡನ್ನು ಬಳಸುವುದು.
- ವಾಹನಗಳನ್ನು ಠಾಣೆಗೆ ತರುವಾಗ, ವಾಹನಗಳ ಹ್ಯಾಂಡ್‌ಗಳನ್ನು ಮುಟ್ಟುವಾಗ ಸ್ಯಾನಿಟೈಸರ್ ಬಳಸುವುದು ಹಾಗೂ ಕೈಗಳಿಗೆ ಹ್ಯಾಂಡ್ ಗ್ಲೌಸ್ ಬಳಸಿ ವಾಹನಗಳನ್ನು ಠಾಣೆಗೆ ರವಾನಿಸುವುದು.
- ಠಾಣೆಯಿಂದ ಕರ್ತವ್ಯ ಮುಗಿಸಿ ಮನೆಗೆ ಹೋಗುವಾಗ ಮಾಸ್ಕನ್ನು, ಹ್ಯಾಂಡ್ ಗ್ಲೌಸ್‌ಗಳನ್ನು ಪ್ರತ್ಯೇಕ ಮಾಡಿ ಪ್ರತ್ಯೇಕ ಸ್ಥಳದಲ್ಲಿ ಹಾಕುವುದು ಹಾಗೂ ಶುಚಿಗೊಳಿಸುವುದು.
- ಸಿಗ್ನಲ್ ಸ್ವಿಚ್‌ಗಳನ್ನು ಆಫ್ ಮತ್ತು ಆನ್ ಮಾಡುವಾಗ ಕಡ್ಡಾಯವಾಗಿ ಸ್ಯಾನಿಟೈಸರ್ ಬಳಸುವುದು.
- ಹೆಚ್ಚಿನ ವಾಹನಗಳನ್ನು ಸ್ಥಳದಲ್ಲಿ ನಿಲ್ಲಿಸಿಕೊಂಡು ಗುಂಪು ಸೇರಿಸಬಾರದು.
- ಸ್ಥಳದಂಡ ವಿಧಿಸುವಾಗ ವಾಹನಗಳನ್ನಾಗಲೀ ಅಥವಾ ಸವಾರರನ್ನಾಗಲೀ ಮುಟ್ಟಬಾರದು.
- ಹೆಚ್ಚಾಗಿ ಕಣ್ಣಿಗೆ ಕಾಣುವಂತಹ ಸಂಚಾರ ನಿಯಮ ಉಲ್ಲಂಘನೆಗಳಿಗೆ ಮಾತ್ರ ಸ್ಥಳ ದಂಡ ವಿಧಿಸುವುದು.
- ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ವಾಹನಗಳ ದಾಖಲಾತಿಗಳನ್ನು ಪರಿಶೀಲನೆ ಮಾಡುವುದು ಹಾಗೂ ದಾಖಲಾತಿಗಳನ್ನು ಪರಿಶೀಲಿಸುವಾಗ ಹ್ಯಾಂಡ್ ಗ್ಲೌಸ್‌ಗಳನ್ನು ಕಡ್ಡಾಯವಾಗಿ ಬಳಸುವುದು.
- ವಾಹನಗಳನ್ನು ಟೋಯಿಂಗ್ ಮಾಡಬೇಕಾದ ಸಂದರ್ಭದಲ್ಲಿ ಪ್ರತ್ಯೇಕ ಟೋಯಿಂಗ್ ವಾಹನಗಳನ್ನು ಬಳಸುವುದು.
- ವಸೂಲಾದ ದಂಡದ ಹಣವನ್ನು ಪ್ರತ್ಯೇಕವಾದ ಬಾಕ್ಸ್ ಮಾಡಿ ಅದರಲ್ಲಿ ಹಣವನ್ನು ಹಾಕುವುದು, ಹಣವನ್ನು ಪಡೆಯುವಾಗ ಬಾಕ್ಸ್‌ನಲ್ಲಿ ಪಡೆಯುವುದು.
- ಠಾಣೆಗೆ ತೆಗೆದುಕೊಂಡು ಹೋದ ಹಣವನ್ನು ಪ್ರತ್ಯೇಕವಾಗಿ ಅದನ್ನು ಒಂದು ಬಾಕ್ಸ್‌ನಲ್ಲಿ ಹಾಕಿ ನಂತರ ಅದನ್ನು ಬ್ಯಾಂಕ್‌ಗೆ ಜಮೆ ಮಾಡುವುದು.
- ದಂಡದ ಹಣವನ್ನು ಪಡೆದ ನಂತರ ಸ್ಯಾನಿಟೈಸರ್‌ನಿಂದ ಕೈಗಳಿಗೆ ಸಿಂಪಡಿಸಿಕೊಳ್ಳುವುದು.
- ವಾಹನದ ಸವಾರರುಗಳ ಮೊಬೈಲ್ ಫೋನ್‌ಅನ್ನು ಮುಟ್ಟದೆ ಲೌಡ್ ಸ್ಪೀಕರ್‌ಗಳನ್ನು ಉಪಯೋಗಿಸಿ ಮಾತನಾಡುವಂತೆ ಸೂಚಿಸುವುದು.

- ಸಾರ್ವಜನಿಕರು ಹಾಗೂ ಸಿಬ್ಬಂದಿಗಳ ಮಧ್ಯ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು ಹಾಗೂ ಸಾರ್ವಜನಿಕರನ್ನು ಅನಾವಶ್ಯಕವಾಗಿ ಮಾತನಾಡಿಸದೇ ಇರುವುದು.

6.2 ಸಂಚಾರ ಸುವ್ಯವಸ್ಥೆಯ ವೇಳೆಯಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಗಳು ಅನುಸರಿಸಬೇಕಾದ ಕ್ರಮಗಳು:

- ಕರ್ತವ್ಯದಲ್ಲಿ ಹ್ಯಾಂಡ್ ಗ್ಲೌಸ್, ಮಾಸ್ಕ್, ಫೇಸ್ ಶೀಲ್ಡ್‌ಗಳನ್ನು ಕಡ್ಡಾಯವಾಗಿ ಧರಿಸಬೇಕು.
- ನಿಯಮಿತವಾಗಿ ಹ್ಯಾಂಡ್ ಸ್ಯಾನಿಟೈಸರ್ ಉಪಯೋಗಿಸಬೇಕು.
- ಕರ್ತವ್ಯದ ಅವಧಿಯಲ್ಲಿ ಬಾಡಿ ವಾರ್ನ್ ಕ್ಯಾಮರಾಗಳನ್ನು ಬಳಸುವುದು ಒಳಿತು ಅವಶ್ಯಕವಿದ್ದಲ್ಲಿ ಮೆಗಾ ಫೋನ್‌ಗಳನ್ನು ಬಳಸುವುದು.
- ಕರ್ತವ್ಯದ ಸಂದರ್ಭದಲ್ಲಿ ಬ್ಯಾರಿಕೇಡ್ ಹಾಗೂ ಛತ್ರಿಗಳನ್ನು ಉಪಯೋಗಿಸುವುದು.
- ಪಾಯಿಂಟ್ ಕರ್ತವ್ಯದಲ್ಲಿ ಸಾರ್ವಜನಿಕರೊಂದಿಗೆ ಅನಾವಶ್ಯಕವಾಗಿ ಮಾತನಾಡಬಾರದು.
- ಯಾವುದಾದರೂ ನಿಯಮ ಉಲ್ಲಂಘನೆಗಳು ಕಂಡು ಬಂದಲ್ಲಿ ಮೊದಲು ವಾಹನದ ಸಂಖ್ಯೆಯು ಕಾಣುವಂತೆ ಮೊಬೈಲ್‌ನಿಂದ ಫೋಟೋವನ್ನು ತೆಗೆದುಕೊಳ್ಳುವುದು.
- ಪಾಯಿಂಟ್ ಕರ್ತವ್ಯದಲ್ಲಿ ವೇಳೆಯಲ್ಲಿ ಯಾವುದಾದರೂ ವಾಹನ ಅಪಘಾತ ನಡೆದ ವೇಳೆಯಲ್ಲಿ ಸಾರ್ವಜನಿಕರು ಗುಂಪು ಸೇರದಂತೆ ಹಾಗೂ ಸಾಮಾಜಿಕ ಅಂತರವನ್ನು ಕಾಪಾಡುವಂತೆ ಸೂಚಿಸುವುದು. ಹಾಗೂ ಗುಂಪಿನ ಜೊತೆಯಲ್ಲಿ ಕರ್ತವ್ಯ ನಿರತ ಸಿಬ್ಬಂದಿಯವರು ಸೇರಿಕೊಳ್ಳದೆ ಸಾಮಾಜಿಕ ಅಂತರವನ್ನು ಕಾಪಾಡುವುದು.
- ಸಿಗ್ನಲ್ ಲೈಟ್‌ಗಳನ್ನು ಆನ್ ಮತ್ತು ಆಫ್ ಮಾಡುವಾಗ ಕಡ್ಡಾಯವಾಗಿ ಸ್ಯಾನಿಟೈಸರ್‌ನ್ನು ಬಳಸುವುದು.

6.3 ಅಪಘಾತದ ಕೃತ್ಯ ನಡೆದ ಸ್ಥಳದಲ್ಲಿ ಅನುಸರಿಸಬೇಕಾದ ಕ್ರಮಗಳು.

- ಅಪಘಾತ ಸ್ಥಳಕ್ಕೆ ಹೋಗುವ ಸಿಬ್ಬಂದಿಗಳು ಮಾಸ್ಕ್ ಮತ್ತು ಗ್ಲೌಸ್‌ನ್ನು ಕಡ್ಡಾಯವಾಗಿ ಧರಿಸುವುದು.
- ಅಪಘಾತ ನಡೆದ ಸ್ಥಳಕ್ಕೆ [illegible] ಸೇರದಂತೆ ಮತ್ತು ಸಿಗಬಹುದಾದ ಸಾಕ್ಷ್ಯ ನಾಶವಾಗದಂತೆ [illegible] ಸಂರಕ್ಷಿಸುವುದು ಹಾಗೂ ಕೃತ್ಯ ನಡೆದ ಸ್ಥಳದ ಹೊರಗಡೆ [illegible].
- ಕೃತ್ಯ ನಡೆದ ಸ್ಥಳದಲ್ಲಿ ಗಾಯಾಳುಗಳು ಅಥವಾ ಕೃತ್ಯಕ್ಕೆ ಭಾಗಿಯಾಗಿರುವ ವಾಹನವನ್ನು ಮುಟ್ಟುವಾಗ ಹ್ಯಾಂಡ್ ಗ್ಲೌಸ್ ಬಳಸುವುದು.
- ಕೃತ್ಯ ನಡೆದ ಸ್ಥಳದಲ್ಲಿ ಮೃತನಿಂದ ಮತ್ತು ಗಾಯಾಳುವಿನ ಕೆಲವು ಕೈ, ಕಾಲು ಮತ್ತು ತೋಳುಗಳನ್ನು ಹಿಡಿದುಕೊಂಡು ಯಾವುದಾದರೂ ಅಥವಾ ಆಂಬುಲೆನ್ಸ್ ವಾಹನದಲ್ಲಿ ಸಾಗಿಸುವುದು.
- ಮೃತನ ಶವವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿದ ನಂತರ ಮರಣೋತ್ತರ ಪರೀಕ್ಷೆಯ ವೇಳೆಯಲ್ಲಿ ಮೃತನ ಸ್ವಾಬ್ ಟೆಸ್ಟನ್ನು ಮಾಡಿಸುವುದು.
- ಅಪಘಾತ ನಡೆದ ಸ್ಥಳವನ್ನು ಸಂಪೂರ್ಣವಾಗಿ ಚಿತ್ರೀಕರಣ ಮಾಡುವುದು ಕಡ್ಡಾಯ ಹಾಗೂ ಅಪಘಾತದ ವಾಹನಗಳನ್ನು ಸಾಗಿಸುವಾಗ ಸ್ಯಾನಿಟೈಸರ್ ಬಳಕೆ ಮಾಡುವುದು.
- ಠಾಣೆಗೆ ಬಂದ ತನಿಖಾಧಿಕಾರಿ ಹಾಗೂ ತನಿಖಾ ಸಹಾಯಕರು ಕೂಡ ಗಾಯಾಳು ಮತ್ತು ಮೃತನ ಶವವನ್ನು ಚಿಕಿತ್ಸೆಗೆ ಸಾಗಿಸಿದ ನಂತರ ಠಾಣೆಯಲ್ಲಿ ಬಂದು ಸಿಬ್ಬಂದಿಗಳಿಂದ ಅಂತರವನ್ನು ಕಾಯ್ದುಕೊಳ್ಳುವುದು ಹಾಗೂ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆ ಅಥವಾ [illegible] ಪಡೆಯುವ ವೇಳೆಯಲ್ಲಿ ಮೇಲ್ಕಂಡ ಸೂಚನೆಗಳನ್ನು ಪಾಲನೆ ಮಾಡುವುದು.

- ಸಾಕ್ಷಿದಾರರ ಹೇಳಿಕೆಯನ್ನು ಠಾಣೆಯಲ್ಲಿ ಪಡೆಯುವ ಸಂದರ್ಭದಲ್ಲಿ ಸಾಕ್ಷಿದಾರರು ಠಾಣೆಗೆ ಪ್ರವೇಶಿಸುವ ಮುನ್ನ ಸ್ಯಾನಿಟೈಸರ್/ಸೋಪಿನಿಂದ ಕೈಗಳನ್ನು ಸ್ವಚ್ಛಗೊಳಿಸಿಕೊಳ್ಳುವಂತೆ ಮತ್ತು ಮಾಸ್ಕ್ ಕಡ್ಡಾಯವಾಗಿ ಧರಿಸುವಂತೆ ಸೂಚಿಸುವುದು.
- ಸಾಕ್ಷಿದಾರರುಗಳನ್ನು ಮತ್ತು ಗಾಯಾಳುಗಳನ್ನು ವಿಚಾರಣೆ ಮಾಡುವಾಗ ಕಡ್ಡಾಯವಾಗಿ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು.
- ತನಿಖೆಗೆ ಸಹಾಯವಾಗುವ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸುವ ಸಂದರ್ಭದಲ್ಲಿ ಬರಿ ಕೈಗಳಿಂದ ಮುಟ್ಟದೆ ಗ್ಲೌಸ್ ಧರಿಸಿ ತನಿಖಾ ಉಪಕರಣಗಳನ್ನು ಬಳಸಿ ವಶಕ್ಕೆ ಪಡೆದುಕೊಳ್ಳುವುದು.

6.4 ಇಂಟರ್‌ಸೆಪ್ಟರ್ ವಾಹನದ ಸಿಬ್ಬಂದಿಗಳು ಅನುಸರಿಸಬೇಕಾದ ಕ್ರಮಗಳು:

- ಕರ್ತವ್ಯದ ವೇಳೆಯಲ್ಲಿ ಮಾಸ್ಕ್, ವೈಸರ್ ಮತ್ತು ಗ್ಲೌಸ್ ಹಾಗೂ ಸ್ಯಾನಿಟೈಸರ್‌ಗಳನ್ನು ವಾಹನದಲ್ಲಿ ಮುಂಜಾಗ್ರತಾ ಕ್ರಮವಾಗಿ ಇಟ್ಟುಕೊಂಡಿರುವುದು.
- ಅಪಘಾತ ನಡೆದ ಸ್ಥಳಕ್ಕೆ ಭೇಟಿ ನೀಡಿದ ವೇಳೆಯಲ್ಲಿ ಮಾಸ್ಕ್, ವೈಸರ್ ಮತ್ತು ಗ್ಲೌಸ್‌ಗಳನ್ನು ಧರಿಸಿಕೊಂಡು ಭೇಟಿ ನೀಡುವುದು.
- ಅಪಘಾತದಿಂದ ಗಾಯಗೊಂಡಂತಹ ವ್ಯಕ್ತಿಗಳನ್ನು ಆಂಬುಲೆನ್ಸ್ ವಾಹನದಲ್ಲಿ [illegible] ಜೊತೆಯೊಂದಿಗೆ ಕಳುಹಿಸಿಕೊಡುವುದು. ಈ ಸಮಯದಲ್ಲಿ [illegible] ಕಡ್ಡಾಯವಾಗಿ ಧರಿಸಬೇಕು.
- ಅಪಘಾತ ಸ್ಥಳದಿಂದ ಅಪಘಾತಕ್ಕೆ ಸಂಬಂಧಪಟ್ಟ ವಾಹನಗಳನ್ನು ಕಡ್ಡಾಯವಾಗಿ ಹ್ಯಾಂಡ್‌ಗ್ಲೌಸ್ ಹಾಕಿಕೊಂಡು ಮುಟ್ಟುವುದು ಅಥವಾ ಸ್ಥಳಾಂತರಿಸುವುದು.
- ಅಪಘಾತದ ಸ್ಥಳದಲ್ಲಿ ಪೊಲೀಸ್ ಸಿಬ್ಬಂದಿಗಳು ಗುಂಪಿನ ಜೊತೆಯಲ್ಲಿ ಸೇರಿಕೊಳ್ಳದೇ ಅಂತರವನ್ನು ಕಾಪಾಡಿಕೊಳ್ಳುವುದು.
- ಸಾರ್ವಜನಿಕರು ಸೇರಿಕೊಳ್ಳದಂತೆ ವಾಹನದಲ್ಲಿರುವ ಪಬ್ಲಿಕ್ ಅಡ್ರೆಸ್ ಸಿಸ್ಟಂನಿಂದ ತಿಳುವಳಿಕೆಯನ್ನು ನೀಡುವುದು.
- ಅಪಘಾತ ನಡೆದ ವೇಳೆಯಲ್ಲಿ ಸಂಚಾರಕ್ಕೆ ಅಡಚಣೆಯಾಗದಂತೆ ನೋಡಿಕೊಳ್ಳುವ ಸಮಯದಲ್ಲಿ ಸಾಮಾಜಿಕ ಅಂತರವನ್ನು ಕಾಪಾಡಿಕೊಂಡು ವಾಹನಗಳನ್ನು ತೆರವುಗೊಳಿಸುವುದು.
- ಮದ್ಯಪಾನ ಮಾಡಿ ವಾಹನಗಳನ್ನು ಚಲಾಯಿಸುವ ಚಾಲಕರನ್ನು ತಪಾಸಣೆ ಮಾಡುವಾಗ ಆಲ್ಕೋಮೀಟರ್‌ನಿಂದ ಪರೀಕ್ಷಿಸುವ ಸಿಬ್ಬಂದಿಗಳು ಕಡ್ಡಾಯವಾಗಿ ಎನ್-95 ಮಾಸ್ಕ್, ಫೇಸ್ ಶೀಲ್ಡ್, ಹ್ಯಾಂಡ್ ಗ್ಲೌಸ್ ಮತ್ತು [illegible] ಧರಿಸುವುದು.
- ಅಪಘಾತ ಸ್ಥಳದಿಂದ ಅಪಘಾತಕ್ಕೆ ಸಂಬಂಧಪಟ್ಟ ವಾಹನಗಳನ್ನು ಕಡ್ಡಾಯವಾಗಿ ಹ್ಯಾಂಡ್‌ಗ್ಲೌಸ್ ಹಾಕಿಕೊಂಡು ಮುಟ್ಟುವುದು ಅಥವಾ ಸ್ಥಳಾಂತರಿಸುವುದು.
- ದಾಖಲಾತಿಗಳನ್ನು ಪಡೆಯುವಾಗ ಸಂಬಂಧಪಟ್ಟ ಅಧಿಕಾರಿ ಮತ್ತು ಸಿಬ್ಬಂದಿಗಳು ಹ್ಯಾಂಡ್‌ಗ್ಲೌಸ್ ಹಾಗೂ ಕೈಗಳಿಗೆ ಸ್ಯಾನಿಟೈಸರ್‌ನ್ನು ಬಳಸಿ ನಂತರ ಪಡೆಯುವುದು.

7 ಆಡಳಿತ ವಿಭಾಗದಲ್ಲಿ ಅನುಸರಿಸಬೇಕಾದ ನಿಯಮಗಳು:

- ಕಛೇರಿಗಳಲ್ಲಿ ಕಡ್ಡಾಯವಾಗಿ ಮಾಸ್ಕ್ ಧರಿಸುವ ಬಗ್ಗೆ, ಸ್ಯಾನಿಟೈಸರ್ ಉಪಯೋಗಿಸುವ ಬಗ್ಗೆ ಮತ್ತು ಶುಚಿತ್ವ ಕಾಪಾಡುವ ಬಗ್ಗೆ ಸಿಬ್ಬಂದಿಗಳಿಗೆ [illegible] ಜಾಗೃತಿ ಮೂಡಿಸುವುದು.
- ಕಛೇರಿಯ ಆವರಣದಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದು ಮತ್ತು ಪ್ರತಿದಿನ ಕರ್ತವ್ಯ ನಿರ್ವಹಿಸುವ ಸ್ಥಳ, ಶೌಚಾಲಯ ಮತ್ತು ಗೋಡೆಗಳಿಗೆ ಸೋಂಕು ನಿವಾರಕ ಔಷಧಿಯನ್ನು ಸಿಂಪಡಿಸಬೇಕು.

- ಕಛೇರಿಯ ಮುಖ್ಯದ್ವಾರದಲ್ಲಿ ಆಗಮಿಸುವ ಮತ್ತು ನಿರ್ಗಮಿಸುವ ಎಲ್ಲಾ ಸಿಬ್ಬಂದಿಗಳು/ಸಾರ್ವಜನಿಕರಿಗೆ ಕಡ್ಡಾಯವಾಗಿ ಥರ್ಮಲ್ ಸ್ಕ್ರೀನಿಂಗ್ ತಪಾಸಣೆ ಮಾಡಬೇಕು.
- ಸಂಗ್ರಹ ಶಾಖೆಯಿಂದ ಎಲ್ಲಾ ಠಾಣೆಗಳಿಗೆ ಸುರಕ್ಷತಾ ಸಾಮಗ್ರಿಗಳನ್ನು ರವಾನೆ ಮಾಡುವುದು
- ಸಂಗ್ರಹ ಶಾಖೆಗೆ ಬರುವಂತಹ ಎಲ್ಲಾ ಸಾಮಗ್ರಿಗಳನ್ನು ಸ್ಯಾನಿಟೈಜ್ ಮಾಡುವುದು.
- ಸಾಧ್ಯವಾದಷ್ಟು ಆನ್‌ಲೈನ್ ಮತ್ತು ದೂರವಾಣಿ ಮುಖಾಂತರ ದೂರು ಸ್ವೀಕೃತಿ ವ್ಯವಸ್ಥೆ.
- ಸಂದರ್ಶಕರು/ದೂರುದಾರರ ದೂರು ಸ್ವೀಕೃತಿಗೆ ಪ್ರತ್ಯೇಕವಾಗಿ Single window ವ್ಯವಸ್ಥೆ- ಕಛೇರಿಯ ಮುಂಭಾಗ ಹೊರ ಆವರಣದಲ್ಲಿ(ತೆರೆದ ಸ್ಥಳ) ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವಂತೆ 2 ಟೇಬಲ್‌ಗಳನ್ನು ಹಾಕಿ ವ್ಯವಸ್ಥೆ ಮಾಡುವುದು.
- ಠಾಣೆಯಿಂದ ಕಛೇರಿಗೆ ನೀಡುವ ಟಪಾಲ್‌ಗಳನ್ನು ಮುದ್ದಾಂ ಬದಲಿಗೆ ಆನ್‌ಲೈನ್/ಇ-ಮೇಲ್ ಮುಖಾಂತರ ಕಳಿಸುವ ವ್ಯವಸ್ಥೆ ಮಾಡಿದ್ದಲ್ಲಿ ಜನರ ಸಂಪರ್ಕ ಕಡಿಮೆ ಮಾಡಬಹುದು.
- ಟಪಾಲುಗಳನ್ನು ಮುದ್ದಾಂ ಸ್ವೀಕರಿಸಿದಲ್ಲಿ ತಕ್ಷಣ ಸ್ಯಾನಿಟೈಜೇಷನ್ ಮಾಡುವುದು.
- ಆಡಳಿತ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳು ರಜೆಯ ಮೇಲೆ ಕೇಂದ್ರಸ್ಥಾನ ಬಿಟ್ಟು ತೆರಳುವಾಗ ಯಾವ ಊರಿಗೆ ತೆರಳುತ್ತಾರೆ ಎಂಬ ಬಗ್ಗೆ ಮಾಹಿತಿಯನ್ನು ಪ್ರತ್ಯೇಕ ರಿಜಿಸ್ಟರ್‌ನಲ್ಲಿ ಕಡ್ಡಾಯವಾಗಿ ನಮೂದಿಸುವ ವ್ಯವಸ್ಥೆ ಮಾಡಬೇಕು.
- ಅನಿವಾರ್ಯವಿಲ್ಲದೆ ಸಾರ್ವಜನಿಕರನ್ನು ಕಟ್ಟುನಿಟ್ಟಾಗಿ ನಿಯಂತ್ರಿಸುವ ವ್ಯವಸ್ಥೆ ಎದುರಾದಲ್ಲಿ ಸೂಕ್ತ ಭದ್ರತೆಗಳನ್ನು ಅನುಸರಿಸಿ ಕ್ರಮಕೈಗೊಳ್ಳುವುದು.
- 55 ವರ್ಷ ಮೀರಿದ ಸಿಬ್ಬಂದಿಗಳನ್ನು ಹಾಗೂ ಗರ್ಭಿಣಿ ಸ್ತ್ರೀಯರನ್ನು ಯಾವುದೇ ರೀತಿಯ ಕೋವಿಡ್ -19 ಗೆ ಸಂಬಂಧಿಸಿದ ಮುಂಚೂಣಿ ಕರ್ತವ್ಯಕ್ಕೆ ನಿಯೋಜಿಸದೆ ಠಾಣಾ ಒಳಭಾಗದ ಕರ್ತವ್ಯ ನಿರ್ವಹಿಸುವುದು ಹಾಗೂ ಯಾವುದೇ ಸಿಬ್ಬಂದಿಗಳಿಗೆ ವೈದ್ಯಕೀಯ ಶಿಫಾರಸ್ಸಿನ ಮೇರೆಗೆ ರಜೆಯ ಅವಶ್ಯಕತೆ ಇದ್ದರೆ ರಜೆಯನ್ನು ಮಂಜೂರು ಮಾಡುವುದು ಎಂದು ಸಂಬಂಧಪಟ್ಟ ಉಪ ಪೊಲೀಸ್ ಆಯುಕ್ತರು ಸುತ್ತೋಲೆ ಹೊರಡಿಸುವುದು.
- ಕೋವಿಡ್-19 ಸಂಬಂಧವಾಗಿ ಅಧಿಕಾರಿ/ಸಿಬ್ಬಂದಿಗಳು/ಲಿಪಿಕ ಸಿಬ್ಬಂದಿಗಳಿಗೆ ಸಮಾಲೋಚಕರನ್ನು ನಡೆಸಲು ಕೋವಿಡ್ ಕಛೇರಿಯನ್ನು ತೆರೆದು, ಓರ್ವ ತಜ್ಞ ಸಮಾಲೋಚಕರನ್ನು ನಿಯೋಜಿಸಿಕೊಂಡು ಆಗಿಂದ್ದಾಗ್ಗೆ ಸಭೆ ನಡೆಸಿ ಸಮಾಲೋಚನೆ ನಡೆಸಲು ಕ್ರಮಕೈಗೊಳ್ಳಬೇಕು.
- ಕಛೇರಿಗಳಲ್ಲಿ ಸಭೆಗಳನ್ನು/ಬ್ರೀಫಿಂಗ್ ಕೈಗೊಳ್ಳುವಾಗ 10 ಕ್ಕಿಂತ ಹೆಚ್ಚಿನ ಸಿಬ್ಬಂದಿಗಳಿದ್ದಲ್ಲಿ 6 ಅಡಿಗಳ ಅಂತರವನ್ನು ಕಾಯ್ದುಕೊಳ್ಳಬೇಕು. ಆದಷ್ಟು ಆನ್‌ಲೈನ್ ಮೀಟಿಂಗ್ ವ್ಯವಸ್ಥೆ ಅನುಸರಿಸುವುದು.
- ಸಾರ್ವಜನಿಕರು ಜಂಟಿ ಪೊಲೀಸ್ ಆಯುಕ್ತರು, ಉಪ ಪೊಲೀಸ್ ಆಯುಕ್ತರು/ ಸಹಾಯಕ ಪೊಲೀಸ್ ಆಯುಕ್ತರವರುಗಳಿಗೆ ದೂರು ನೀಡಲು ಗುಂಪಾಗಿ ಬಂದಾಗ ಮುಖ್ಯದ್ವಾರದಲ್ಲಿ ಪರಿಶೀಲನೆ ನಡೆಸಿ ಮುಖ್ಯ ಅರ್ಜಿದಾರರಿಗೆ ಮಾತ್ರ ಭೇಟಿ ಮಾಡಲು ಅನುಮತಿಸಬೇಕು.
- ಸಂಗ್ರಹ ಶಾಖೆಯಿಂದ ವಿತರಿಸಲಾಗುವ ಎಲ್ಲಾ ಬಗೆಯ ಸಾಮಗ್ರಿಗಳನ್ನು (ಪ್ಲಾಸ್ಟಿಕ್ ಪರಿಕರಗಳು/ಲೇಖನ ಸಾಮಗ್ರಿಗಳು) ಪಾರದರ್ಶಕವಾಗಿ ಟೆಂಡರ್ ಮುಖಾಂತರ ಖರೀದಿಸಲು ಕ್ರಮಕೈಗೊಳ್ಳುವುದು.
- ಅಧಿಕಾರಿಗಳ ಅಪರಾಧ ವಿಮರ್ಶನಾ ಸಭೆಗಳನ್ನು ಸಾಧ್ಯವಾದಷ್ಟು ಉಪವಿಭಾಗವಾರು ವಿಡಿಯೋ ಕಾನ್ಫರೆನ್ಸ್ (ಜೂಮ್ ಆಪ್) ಮೂಲಕ ನಡೆಸುವುದು.

- ಅಗತ್ಯ ಸಂದರ್ಭದಲ್ಲಿ ಕಾನ್ಫರೆನ್ಸ್ ಹಾಲ್‌ನಲ್ಲಿ ನಡೆಯುವ ಸಭೆಗಳನ್ನು ಪ್ರಾರಂಭಿಸುವ ಮುನ್ನ ಸ್ಥಳ/ಹಾಲ್‌ನ್ನು ಸೋಂಕು ನಿವಾರಕ ದ್ರಾವಣದಿಂದ ಶುದ್ಧಪಡಿಸುವುದು.
- ಸಭೆಗಳನ್ನು ಆದಷ್ಟು ವಿಡಿಯೋ ಕಾನ್ಫರೆನ್ಸ್ ಮುಖಾಂತರ ನಡೆಸುವುದು. ಮಾಡಲೇಬೇಕಾದ ಸಂದರ್ಭದಲ್ಲಿ ಸಭೆ ನಡೆಯುವ ಸ್ಥಳ/ಹಾಲ್‌ನ ಪ್ರವೇಶ ದ್ವಾರದಲ್ಲಿ ಸ್ಯಾನಿಟೈಸರ್ ವ್ಯವಸ್ಥೆಯಾಗುವುದು ಮತ್ತು ಎಲ್ಲಾ ಸದಸ್ಯರು ತಪ್ಪದೆ ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸುವುದು.
- ಅಗತ್ಯ ಸಂದರ್ಭದಲ್ಲಿ ಕಾನ್ಫರೆನ್ಸ್ ಹಾಲ್‌ನಲ್ಲಿ ನಡೆಯುವ ಸಭೆಗಳಲ್ಲಿ ತಪ್ಪದೆ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು.
- ಅಧಿಕಾರಿ/ಸಿಬ್ಬಂದಿಗಳಿಗೆ ಸೂಚನೆಗಳನ್ನು ನೀಡುವಾಗ ದೂರವಾಣಿ/ವೈರ್‌ಲೆಸ್ ಉಪಯೋಗಿಸುವುದು. ಅಗತ್ಯತೆ ಇದ್ದಲ್ಲಿ ವಹಿಗಳು, ಸ್ಯಾನಿಟೈಸರ್ ಮತ್ತು ಗ್ಲೌಸ್‌ಗಳನ್ನು ಉಪಯೋಗಿಸುವುದು.
- ಸಾಮಾಜಿಕ ಸಂದೇಶಗಳನ್ನು ರವಾನಿಸುವಾಗ ವಾಟ್ಸ್ ಆಪ್ ಗ್ರೂಪ್‌ಗಳ ಮುಖಾಂತರ ರವಾನಿಸುವುದು.
- ಸಭೆಗಳನ್ನು ಹೆಚ್ಚಾಗಿ ತೆರೆದ ಸ್ಥಳಗಳಲ್ಲಿ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು "ಸಭೆ ನಡೆಸುವುದು.
- ಠಾಣೆಯ ಆವರಣದಲ್ಲಿರುವ ವಾಹನಗಳು ಹಾಗೂ ಇಲಾಖೆಯಲ್ಲಿನ ಅನುಪಯುಕ್ತ ವಾಹನಗಳನ್ನು ವಿಲೇವಾರಿಯನ್ನು, ಎಂ.ಎಸ್.ಟಿ.ಸಿ.ಕೇಂದ್ರ ಸರ್ಕಾರದ ಸ್ವಾಯತ್ತ ಸಂಸ್ಥೆ ಮುಖಾಂತರ ಇ-ಹರಾಜು ವಿಲೇ ಮಾಡಲು ಕ್ರಮಕೈಗೊಳ್ಳಬಹುದು.
- ಅಧಿಕಾರಿ/ಸಿಬ್ಬಂದಿಗಳಿಗೆ ಉತ್ತಮ ನೈರ್ಮಲ್ಯ (Good Hygiene) ಬಗ್ಗೆ ತರಬೇತಿಯನ್ನು ನೀಡಿ, ಅವುಗಳನ್ನು ಕೆಲಸದ ಸ್ಥಳಗಳಲ್ಲಿ ದಿನನಿತ್ಯ ಅಭ್ಯಾಸ ಮಾಡಬೇಕು.

8. ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಹಾಗೂ ಅಧಿಕಾರಿಗಳು:

- ಪೊಲೀಸ್ ಸಿಬ್ಬಂದಿಗಳು ಕಡ್ಡಾಯವಾಗಿ 3- ಪದರದ ಮಾಸ್ಕ್‌ಗಳನ್ನು ಕಡ್ಡಾಯವಾಗಿ ಧರಿಸುವುದು. ಮಾಸ್ಕ್‌ಗಳನ್ನು ಧರಿಸುವಾಗ ಕೈಗಳನ್ನು ಸ್ವಚ್ಛಗೊಳಿಸಿಕೊಂಡು ಬಾಯಿ ಹಾಗೂ ಮೂಗು ಸಂಪೂರ್ಣವಾಗಿ ಮಾಸ್ಕ್‌ನಿಂದ ಮುಚ್ಚುವಂತೆ ಧರಿಸಬೇಕು.
- ಮನೆಯಲ್ಲಿ ತಯಾರಿಸಿದ ಬಹುಬಾರಿ ಉಪಯೋಗಿಸುವ ಮಾಸ್ಕ್‌ಗಳನ್ನು ಒಮ್ಮೆ ಬಳಸಿದ ನಂತರ ಬಿಸಿ ನೀರಿನಲ್ಲಿ ಸೋಪಿನಿಂದ ಸ್ವಚ್ಛಗೊಳಿಸಿ. ಐರನ್ ಮಾಡಿ ಧರಿಸುವುದು.
- ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು.
- ಸಾರ್ವಜನಿಕರು ಅನಾವಶ್ಯಕವಾಗಿ ಆಸ್ಪತ್ರೆಯನ್ನು ಪ್ರವೇಶಿಸದಂತೆ ನೋಡಿಕೊಳ್ಳುವುದು.
- ಕೋವಿಡ್ ನಿಗದಿತ ಚಿಕಿತ್ಸಾ ಆಸ್ಪತ್ರೆಯೊಳಗೆ ಸಿಬ್ಬಂದಿಗಳು ಯಾವ ಕಾರಣಕ್ಕೂ ಪ್ರವೇಶಿಸಕೂಡದು ಮತ್ತು ಸಾರ್ವಜನಿಕರ ಸಂಪರ್ಕ ಬರದಂತೆ ನೋಡಿಕೊಳ್ಳುವುದು. ಪ್ರವೇಶ ಅನಿವಾರ್ಯವಾದಾಗ ಕೇವಲ PPE ಧರಿಸಿ ವಿವಿ ಮೇಲ್ವಿಚಾರಣೆಯಲ್ಲಿ ಮಾಡುವುದು.
- ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಸೋಂಕಿಗೆ ಸಂಬಂಧಿಸಿದಂತೆ ಲಕ್ಷಣಗಳು ಕಂಡು ಬಂದಲ್ಲಿ ವೈದ್ಯಾಧಿಕಾರಿಗಳಿಗೆ ತಿಳಿಸಿ ಅವರಿಂದ ಸೂಕ್ತ ಸಲಹೆಗಳನ್ನು ಪಡೆದುಕೊಳ್ಳುವುದು. ಕೆಮ್ಮು ಅಥವಾ ಸೀನು ಇದ್ದ ವ್ಯಕ್ತಿ/ಸೋಂಕು ಶಂಕಿತರ ಬಳಿ ನಿಲ್ಲುವಾಗ ಅಥವಾ ಅಂತವರನ್ನು ಆರೋಗ್ಯ ಕೇಂದ್ರಕ್ಕೆ ಕರೆದೊಯ್ಯುವಾಗ ಸುರಕ್ಷಿತ ಅಂತರ ಕಾಪಾಡಿಕೊಳ್ಳುವುದು.